ಸಂಪುಟ : 8 ಸಂಚಿಕೆ : 146 ಪುಟ : 4 ಬೆಲೆ : 3.00 ಬುಧವಾರ ಜುಲೈ 12, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 146 Pages : 4 Price : 3.00 Wednesday July 12, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿಗಾಗಿ ಸರ್ಕಾರದ ಆದೇಶದನ್ವಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಹಿಂದುಳಿದ ವರ್ಗಗಳ ಕಾನೂನು ಪದವೀಧರರಿಗೆ ತರಬೇತಿಗೆ ಆಯ್ಕೆ ಮಾಡಬೇಕಾಗಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಹಾಗೂ ಅರ್ಹ ಹಿಂದುಳಿದ ವರ್ಗಗಳ ಕಾನೂನು ಪದವೀಧರರು ಭರ್ತಿ ಮಾಡಿದ ಅರ್ಜಿಗಳನ್ನು ಗದಗ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳಿಗೆ ಆಗಸ್ಟ 10ರ ಸಂಜೆ 5ಗಂಟೆಯೊಳಗಾಗಿ ಸಲ್ಲಿಸಬಹುದಾಗಿದೆ.

ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ 208, ಹುಬ್ಬಳ್ಳಿ ರಸ್ತೆ , ಗದಗ ಇವರು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.



ಯುವಜನ ಹಾಗೂ ಕ್ರೀಡಾ ಇಲಾಖೆಯ ನಿರ್ದೇಶಕರಾಗಿ ಎರಡನೇ ಬಾರಿ ಆಯ್ಕೆಯಾಗಿರುವ ಡಾ.ಶರಣು ಗೋಗೇರಿ ಅವರನ್ನು ಅಶ್ವಿನಿ ಪ್ರಕಾಶನ ಹಾಗೂ ಡಾ. ವ್ಹಿ ಬಿ ಹಿರೇಮಠ ಮೆಮೋರಿಯಲ್ ಪ್ರತಿಷ್ಠಾನದ ವತಿಯಿಂದ ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು. ಪ್ರಕಾಶನದ ಅಧ್ಯಕ್ಷೆ ಡಾ. ವೀರಮ್ಮ ಹಿರೇಮಠ, ಕಾರ್ಯದರ್ಶಿ ಪುಟ್ಟರಾಜಸ್ವಾಮಿ ಹಿರೇಮಠ, ಸದಸ್ಯರಾದ ಮಹೇಶ ವಡ್ಡಿನ, ವೀರಯ್ಯ ಹೊಸಮಠ, ಅಶೋಕ ಹಿರೇಮಠ, ಚಿದಾನಂದ ಸಾಲಿಮಠ ಉಪಸ್ಥಿತರಿದ್ದರು.

## ಅಕ್ಷರ ದಾಸೋಹ ನೌಕರರ ಸಂಘದ ವತಿಯಿಂದ ಶಿಕ್ಷಣ ಸಚಿವ ಮಧು ಬಂಗಾರಪ್ಪರಿಗೆ ಮನವಿ

# ಬಿಸಿಯೂಟ ಸಿಬ್ಬಂದಿಗಳನ್ನು ಡಿ ಗ್ರೂಪ್ ನೌಕರರಾಗಿ ಪರಿಗಣಿಸಿ

■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ಗದಗ ತಾಲೂಕು ವತಿಯಿಂದ ಬಿಸಿಯೂಟ ನೌಕರರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಗದಗ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ ಶಿಕ್ಷಣ ಸಚಿವರಾದ ಮಧು ಬಂಗಾರಪ್ಪನವರಿಗೆ ಮನವಿ ಸಲ್ಲಿಸಿದರು.

ಮನವಿ ಸಲ್ಲಿಸಿ ಮಾತನಾಡಿದ ಸಂಘದ ಅಧ್ಯಕ್ಷೆ ಜಯಶ್ರೀ ಹಿರೇಗೌಡರ, ಮಕ್ಕಳ ಶೈಕ್ಷಣಿಕ ಉನ್ನತಿಗೆ, ಮಕ್ಕಳ ಗೈರು ಹಾಜರಿ ತಡೆಗಟ್ಟಲು, ಅಪೌಷ್ಠಿಕತೆ ನಿವಾರಿಸಲು, ಶಿಕ್ಷಣ ಇಲಾಖೆಯ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಕಳೆದ 21 ವರ್ಷಗಳಿಂದ 1 ಲಕ್ಷ 17 ಸಾವಿರ ಮಹಿಳೆಯರು 58 ಲಕ್ಷ 39 ಸಾವಿರ ಬಡ, ರೈತ, ಕೃಷಿಕೂಲಿಕಾರರ, ದೀನ ದಲಿತ ಮಕ್ಕಳಿಗೆ ಬಿಸಿ ಆಹಾರ ಬೇಯಿಸಿ, ಹಾಲು ನೀಡಿ, ಶಾಲಾ ಸ್ವಚ್ಛತೆ ಕೈಗೊಂಡು, ಶಾಲೆಯಲ್ಲಿ ನೀಡುವ ಎಲ್ಲಾ ಕೆಲಸ ನಿರ್ವಹಿಸಿ ಮಕ್ಕಳಲ್ಲಿ ಶೈಕ್ಷಣಿಕ ಆಸಕ್ತಿ ಮೂಡಿಸುವಲ್ಲಿ ಈ ಮಹಿಳೆಯರ ಪರಿಶ್ರಮವಿದೆ. ಇವರ ಶ್ರಮವನ್ನು ಗುರುತಿಸಿ, ಕನಿಷ್ಠ ಕೂಲಿ 21 ಸಾವಿರ ನೀಡಬೇಕಿದೆ ಎಂದರು.

ಯೋಜನೆಯ ಪ್ರಾರಂಭದಿಂದಲೂ ಸಾದಿಲ್ವಾರು ಜವಾಬ್ದಾರಿಯನ್ನು ಶಾಲೆಯ ಮುಖ್ಯೋಪಾಧ್ಯಾಯರು



ಮತ್ತು ಮುಖ್ಯ ಅಡುಗೆಯವರು ನಿರ್ವಹಿಸಿಕೊಂಡು ಬಂದಿದ್ದಾರೆ. ಆದರೆ ಇತ್ತೀಚೆಗೆ ಈ ಜವಾಬ್ದಾರಿಯನ್ನು ಮುಖ್ಯ ಅಡುಗೆಯವರಿಂದ ಎಸ್‌ಡಿಎಮ್‌ಸಿ ಅಧ್ಯಕ್ಷರಿಗೆ ವರ್ಗಾವಣೆ ಮಾಡಿ ಮುಖ್ಯ ಅಡುಗೆ ನೌಕರರಿಗೆ ಇರುವ ಹಕ್ಕನ್ನು ಕಿತ್ತುಕೊಂಡಿದೆ. ಈ ಹಿಂದೆ ಇರುವ ಹಾಗೆ ಕರ್ತವ್ಯ ನಿರ್ವಹಿಸಲು ಅವಕಾಶ ಮಾಡಿಕೊಡಬೇಕು.

ಹಲವಾರು ವರ್ಷಗಳಿಂದ ಈ ಯೋಜನೆಯ ಶ್ರೇಯಸ್ಸಿಗಾಗಿ ಈ ಮಹಿಳೆಯರು ಯಾವುದೇ ಮೂಲಭೂತ ಸೌಲಭ್ಯವಿಲ್ಲದೇ ದುಡಿಯುತ್ತಿದ್ದಾರೆ. ಇಂತಹ ಮಹಿಳೆಯರು ಅಕಸ್ಮಿಕವಾಗಿ ಮರಣ ಹೊಂದಿದ್ದರೆ ಅವರ ಕುಟುಂಬದಲ್ಲಿರುವವರಿಗೆ ಈ ಕೆಲಸ ನೀಡಲು ಆದೇಶ ನೀಡಬೇಕು.

ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಿಗೆ ಏಪ್ರೀಲ್-ಮೇ ತಿಂಗಳ ವೇತನ ನೀಡಲಾಗುತ್ತದೆ. ಆದರೆ ಇದೇ ಇಲಾಖೆಯ ಅಡಿಯಲ್ಲಿ ಕೆಲಸ ಮಾಡುವ ಬಿಸಿಯೂಟದ ಸಿಬ್ಬಂದಿಗಳಿಗೆ ಈ ಸೌಲಭ್ಯ ಇಲ್ಲ. ಅಡುಗೆ ನೌಕರರನ್ನು ಮಾರ್ಚ್ 31ಕ್ಕೆ ಅಧಿಕೃತವಾಗಿ ಇಲಾಖೆಯ ಆದೇಶದಂತೆ ಬಿಡುಗಡೆ ಮಾಡುತ್ತಾರೆ. ಆದರೆ ಏಪ್ರೀಲ್ 10ರವರೆಗೆ ಕೆಲಸ ಮಾಡಿಸುತ್ತಾರೆ. ಇವರು ಕರ್ತವ್ಯ ನಿರ್ವಹಿಸುವ ಹಾಗೆ ಮಾರ್ಚ್ 31ರ ಬದಲು, ಏಪ್ರಿಲ್ 10 ಎಂದು ಆದೇಶವಾಗಬೇಕು.

ಈ ಯೋಜನೆಯ ಯಾವುದೇ ಜವಾಬ್ದಾರಿಯನ್ನು ಖಾಸಗಿ ಸಂಘ-ಸಂಸ್ಥೆಗಳಿಗೆ ನೀಡದೇ ಸರ್ಕಾರದ ಅಧೀನದಲ್ಲಿಯೇ ನಿರ್ವಹಿಸಬೇಕು. ಎಲ್ಲಾ ಕೆಲಸವನ್ನು ಒಬ್ಬರೇ ನಿರ್ವಹಿಸುವುದು ಕಷ್ಟಕರ. ▶▶3ನೇ ಪುಟಕ್ಕೆ

2023ರ ಬಜೆಟ್‌ನಲ್ಲಿ ಹಿಂದಿನ ಸಕಾರ ಬಿಸಿಯೂಟ ನೌಕರರಿಗೆ 1 ಸಾವಿರ ರೂ. ಗೌರವಧನ ಹೆಚ್ಚಳ ಮಾಡುವುದಾಗಿ ಘೋಷಿಸಿತ್ತು. ಆದರೆ ಇನ್ನೂ ಆದೇಶವಾಗಿಲ್ಲ. ವೇತನ ಹೆಚ್ಚಿಸುವುದಲ್ಲದೆ, ಅಕ್ಷರ ದಾಸೋಹ ಮಾರ್ಗಸೂಚಿಯಲ್ಲಿ 4 ಗಂಟೆ ಕೆಲಸ ಎಂದು ತಿದ್ದುಪಡಿ ಮಾಡಬೇಕು. ನಿವೃತ್ತಿಯ ಹೆಸರಿನಲ್ಲಿ ಏನೂ ಪರಿಹಾರ ನೀಡದೇ ಸುಮಾರು 6000 ನೌಕರರನ್ನು ಕೆಲಸದಿಂದ ಕೈ ಬಿಟ್ಟಿದ್ದಾರೆ. ಈ ಹಿಂದೆ ಇಲಾಖೆಯ ಜೊತೆ ಹಲವಾರು ಬಾರಿ ಮಾತುಕತೆ ನಡೆದಿದೆ. ನಿವೃತ್ತಿ ಹೊಂದಿದ ಮತ್ತು ಹೊಂದುತ್ತಿರುವ ಈ ನೌಕರರಿಗೆ 1 ಲಕ್ಷ ರೂ. ಪರಿಹಾರ ನೀಡಲು ಆದೇಶಿಸಬೇಕು ಎಂದು ಬಿಸಿಯೂಟ ನೌಕರರು ಮನವಿಯಲ್ಲಿ ಒತ್ತಾಯಿಸಿದ್ದಾರೆ.

## ಅಪರ ಜಿಲ್ಲಾಧಿಕಾರಿಗಳಾಗಿ ಅನ್ನಪೂರ್ಣ ಮುದುಕಮ್ಮನವರ ಅಧಿಕಾರ ಸ್ವೀಕಾರ

■ ವಿಜಯಸಾಕ್ಷಿ ಸುದ್ದಿ, ಗದಗ

ಸರ್ಕಾರದ ಆದೇಶದನ್ವಯ ಗದಗ ಜಿಲ್ಲೆಯ ಅಪರ ಜಿಲ್ಲಾಧಿಕಾರಿಗಳಾಗಿ ಶ್ರೀಮತಿ ಅನ್ನಪೂರ್ಣ ನಾಗಪ್ಪ ಮುದುಕಮ್ಮನವರ ಅವರು ಸೋಮವಾರದಂದು ಅಧಿಕಾರ ವಹಿಸಿಕೊಂಡಿದ್ದಾರೆ. ಅವರು ಈಗಾಗಲೇ ಈ ಹಿಂದೆ ಮೇ 16ರಂದು ಗದಗ ಜಿಲ್ಲೆಯ ಉಪವಿಭಾಗಾಧಿಕಾರಿಯಾಗಿ ಹಾಗೂ ಹೆಚ್ಚುವರಿಯಾಗಿ



ಅಪರ ಜಿಲ್ಲಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದಾರೆ.

## ಶಕ್ತಿ ಯೋಜನೆಯ ಅಂಕಿ-ಅಂಶಗಳ ಮಾಹಿತಿ ನೀಡಿದ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಭರತ್ ಎಸ್

# ಶಕ್ತಿ ಯೋಜನೆಗೆ ಒಂದು ತಿಂಗಳು

■ ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ರಾಜ್ಯ ಸರ್ಕಾರ ಜಾರಿಗೊಸಿರುವ 'ಶಕ್ತಿ' ಯೋಜನೆಯು ಒಂದು ತಿಂಗಳು ಪೂರೈಸಿದೆ. ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಒಟ್ಟು 4.02 ಕೋಟಿ ಮಹಿಳೆಯರು ಉಚಿತ ಪ್ರಯಾಣ ಮಾಡಿದ್ದು, ಪ್ರಯಾಣದ ಟಿಕೆಟ್ ಮೌಲ್ಯ ರೂ. 103.51 ಕೋಟಿಗಳಾಗಿದೆ ಎಂದು ವಾಕರಸಾ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಭರತ್ ಎಸ್ ತಿಳಿಸಿದ್ದಾರೆ.

ಮಹಿಳಾ ಸಬಲೀಕರಣದ ನಿಟ್ಟಿನಲ್ಲಿ ಉಚಿತ ಪ್ರಯಾಣದ 'ಶಕ್ತಿ' ಯೋಜನೆಗೆ ನಿರೀಕ್ಷೆಗೂ ಮೀರಿ ಸ್ಪಂದನೆ ವ್ಯಕ್ತವಾಗಿದೆ.




ಯೋಜನೆ ಜಾರಿಯಾಗಿ ಜುಲೈ 10ಕ್ಕೆ ಒಂದು ತಿಂಗಳು ಪೂರೈಸಿದ್ದು, ಸಾರ್ವಜನಿಕರ ಸಹಭಾಗಿತ್ವ ಹಾಗೂ ಸಹಕಾರದಿಂದ ಯಶಸ್ವಿಯಾಗಿ ಮುಂದುವರೆದಿದೆ. ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯಾಪ್ತಿಯ ಧಾರವಾಡ, ಬೆಳಗಾವಿ, ಬಾಗಲಕೋಟೆ, ಗದಗ, ಹಾವೇರಿ ಹಾಗೂ ಉತ್ತರ ಕನ್ನಡ ಆರು ▶▶3ನೇ ಪುಟಕ್ಕೆ

ಕೆಲವು ಸಣ್ಣಪುಟ್ಟ ಅಹಿತಕರ ಘಟನೆಗಳನ್ನು ಹೊರತುಪಡಿಸಿದರೆ ಯಾವುದೇ ಲೋಪದೋಷಗಳಿಲ್ಲದೆ ಯೋಜನೆ ಯಶಸ್ವಿಯಾಗಿ ಮುಂದುವರೆದಿದೆ. ಸಂಸ್ಥೆಯಲ್ಲಿ ಹೊಸ ಬಸ್ಸುಗಳ ಸೇರ್ಪಡೆಯಾಗಿಲ್ಲ ಹಾಗೂ ಚಾಲನಾ ಮತ್ತು ತಾಂತ್ರಿಕ ಸಿಬ್ಬಂದಿಗಳ ನೇಮಕಾತಿಯ ಕೊರತೆ ಇದೆ. ಆದಾಗ್ಯೂ ಸಹ ಲಭ್ಯವಿರುವ ಬಸ್ಸುಗಳು ಹಾಗೂ ಮಾನವ ಸಂಪನ್ಮೂಲಗಳ ಸದ್ಬಳಕೆಯ ಮೂಲಕ ಯೋಜನೆಯ ಯಶಸ್ಸಿಗೆ ತಂಡದ ರೂಪದಲ್ಲಿ ಎಲ್ಲಾ ನೌಕರರು ಮತ್ತು ಅಧಿಕಾರಿಗಳ ಕಾರ್ಯಕ್ಷಮತೆ ಕಾರಣವಾಗಿದೆ. ವಾರಾಂತ್ಯ ದಿನಗಳು, ಹಬ್ಬದ ದಿನಗಳು ಮತ್ತು ಸಾರ್ವಜನಿಕ ರಜೆ ದಿಗಳಂದು ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಬಸ್ ನಿಲ್ದಾಣಗಳಲ್ಲಿ ಉಪಸ್ಥಿತರಿದ್ದು, ಜನಸಂದಣಿಗೆ ತಕ್ಕಂತೆ ಹೆಚ್ಚುವರಿ ಬಸ್‌ಗಳನ್ನು ಕಾರ್ಯಾಚರಣೆ ಮಾಡುತ್ತಿರುವುದು ಶ್ಲಾಘನೀಯ.

– ಭರತ್ ಎಸ್.
ವಾಕರಸಾ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು.

## ಮೂಲಭೂತ ಸೌಲಭ್ಯಗಳಿಗೆ ಆಗ್ರಹಿಸಿ ಮನವಿ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ವಾರ್ಡ ನಂ.1 ರ ವ್ಯಾಪ್ತಿಯ ಕೌಡೇಶ್ವರಿ ಬಡಾವಣೆಯ ನಿವಾಸಿಗಳು ಮೂಲಭೂತ ಸೌಲಭ್ಯಗಳಿಗೆ ಆಗ್ರಹಿಸಿ ಮಂಗಳವಾರ ಪುರಸಭೆಗೆ ಮನವಿ ಸಲ್ಲಿಸಿದರು.

ಈ ವೇಳೆ ಮಹಿಳೆಯರು ಅಧಿಕಾರಿಗಳಲ್ಲಿ ತಾವು ಅನುಭವಿಸುತ್ತಿರುವ ಸಮಸ್ಯೆಗಳನ್ನು ಹೇಳಿಕೊಂಡು ಕೌಡೇಶ್ವರಿ ಬಡಾವಣೆಯಲ್ಲಿ 15-20 ವರ್ಷಗಳಿಂದ ಸರಿಯಾದ ರಸ್ತೆ, ಚರಂಡಿ, ಬೀದಿ ದೀಪ, ಮಹಿಳಾ ಸಾರ್ವಜನಿಕ ಶೌಚಾಲಯ ಸೇರಿ ಯಾವುದೇ ಸೌಲಭ್ಯಗಳಿಲ್ಲ. ಇದೀಗ ಮಳೆಗಾಲವಾಗಿದ್ದರಿಂದ ರಸ್ತೆಗಳು ಸಂಪೂರ್ಣ ಹಾಳಾಗಿದ್ದು ಸಂಚಾರ ಕಷ್ಟವಾಗಿದೆ. ನೀರು ರಸ್ತೆಯಲ್ಲಿಯೇ ಹರಿಯುವುದರಿಂದ ಕೊಳಚೆ ನಿರ್ಮಾಣವಾಗಿ ಸೊಳ್ಳೆಗಳ ಸಂಖ್ಯೆ ಹೆಚ್ಚಿದೆ. ಚಿಕ್ಕ ಮಕ್ಕಳು, ವೃದ್ಧರು ರಸ್ತೆಯಲ್ಲಿ ▶▶3ನೇ ಪುಟಕ್ಕೆ

## ಉದ್ಯಾನವನಗಳಲ್ಲಿ ಉದಯರಾಗ, ಸಂಧ್ಯಾರಾಗ ಕಾರ್ಯಕ್ರಮ



■ ವಿಜಯಸಾಕ್ಷಿ ಸುದ್ದಿ, ಗದಗ

ಉದ್ಯಾನವನಗಳಲ್ಲಿ ಉದಯರಾಗ ಕಾರ್ಯಕ್ರಮವು ಭಾನುವಾರದಂದು ಬೆಳಗ್ಗೆ 6.30 ರಿಂದ 7.30ರ ವರೆಗೆ ನಗರದ ರಾಜೀವಗಾಂಧಿ ನಗರದ ಶಿವಶರಣ ಹರಳಯ್ಯ ಉದ್ಯಾನವನ, ವಿಶ್ವೇಶ್ವರಯ್ಯ ನಗರದ ವಿಶ್ವೇಶ್ವರಯ್ಯ ಉದ್ಯಾನವನ ಹಾಗೂ ಕಿತ್ತೂರ ಚನ್ನಮ್ಮ ಉದ್ಯಾನವನದಲ್ಲಿ ಜರುಗಿತು.

ಶಿವಶರಣ ಹರಳಯ್ಯ ಉದ್ಯಾನವನದಲ್ಲಿ ಎಂ.ಜಿ. ಗುರುಸಿದ್ದೇಶ್ವರಶಾಸ್ತ್ರೀ ಬೇವೂರ ಅವರಿಂದ ಸುಗಮ ಸಂಗೀತ, ವಿಶ್ವೇಶ್ವರಯ್ಯ ಉದ್ಯಾನವನದಲ್ಲಿ ಸಿದ್ದೇಶ್ವರಶಾಸ್ತ್ರೀ ತೆಲ್ಲೂರ ಅವರಿಂದ ಕಥಾ ಕೀರ್ತನ ಹಾಗೂ ಕಿತ್ತೂರ ಚನ್ನಮ್ಮ ಉದ್ಯಾನವನದಲ್ಲಿ ಕು.ಪಾರ್ವತಿ ಬಬಲೇಶ್ವರ ಅವರಿಂದ ಸುಗಮ ಸಂಗೀತ ಕಾರ್ಯಕ್ರಮಗಳು ಜರುಗಿದವು.

ಸಾಯಂಕಾಲ 5.30 ರಿಂದ 6.30 ರವರೆಗೆ ನಗರದ ಭೀಷ್ಮಕೆರೆಯ ಬಸವೇಶ್ವರ ಪುತ್ಥಳಿ ಆವರಣದಲ್ಲಿ ಜರುಗಿದ ಸಂಧ್ಯಾರಾಗ ಕಾರ್ಯಕ್ರಮದಲ್ಲಿ ವೀರಯ್ಯ ಹೊಸಮಠ ಅವರಿಂದ ಗಾಯನ ಕಾರ್ಯಕ್ರಮ ಜರುಗಿತು.

## ಇಂದು ವಿದ್ಯುತ್ ವ್ಯತ್ಯಯ

■ ವಿಜಯಸಾಕ್ಷಿ ಸುದ್ದಿ, ಗದಗ

110 ಕೆವ್ಹಿ ಗದಗ, ಡಂಬಳ ಹಾಗೂ ಸಂಭಾಪೂರ ರಸ್ತೆ ಗದಗ ವಿದ್ಯುತ್ ಪ್ರಸರಣಾ ಮಾರ್ಗವನ್ನು ಎತ್ತರಿಸುವ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ಬುಧವಾರ ಬೆಳಿಗ್ಗೆ 8 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಮಾರ್ಗ ಮುಕ್ತತೆ ಕೈಗೊಳ್ಳುವುದರಿಂದ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುತ್ತದೆ.

110ಕೆ.ವ್ಹಿ. ಗದಗ ಉಪಕೇಂದ್ರದಿಂದ ವಿದ್ಯುತ್ ಪೂರೈಕೆಯಾಗುತ್ತಿರುವ ಎಫ್-4 ಕೆಎಸ್‌ಆರ್‌ಟಿಸಿ ಮತ್ತು ಎಫ್-5 ಕಳಸಾಪೂರ 11ಕೆ.ವ್ಹಿ. ಫೀಡರ್‌ಗಳ ಮಾರ್ಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಕಾರಣ ಸಾರ್ವಜನಿಕರು ಸದರಿ ಪ್ರಕಟಣೆ ಗಮನಿಸಿ ಕಂಪನಿಯೊಂದಿಗೆ ಸಹಕರಿಸಬೇಕೆಂದು ನಿಗಮದ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯ ನಿರ್ವಾಹಕ ಇಂಜಿನೀಯರರು ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

## ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸಿ ಕೋರ್ಟ್‌ಗೆ ಅಲೆಯುತ್ತಿದ್ದ ಎರಡು ಜೋಡಿಗಳು

# ಲೋಕ ಅದಾಲತ್‌ನಲ್ಲಿ ಒಂದಾದ ಪತಿ-ಪತ್ನಿ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಕಿರಿಯ ದಿವಾಣಿ ಮತ್ತು ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ಇತ್ತೀಚೆಗೆ ನಡೆದ ಲೋಕ ಅದಾಲತ್‌ನಲ್ಲಿ ಬಾಕಿ ಉಳಿದಿದ್ದ 382 ಕೇಸುಗಳು ಮತ್ತು ಒಟ್ಟು 4,16,33,613 ಮೊತ್ತದ ಪ್ರಕರಣಗಳು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಲಾಗಿದೆ, ಅದೇ ರೀತಿ ವ್ಯಾಜ್ಯ ಪೂರ್ವ ಪ್ರಕರಣಗಳಿಗೆ ಸಂಬಂಧಿಸಿದಂತೆ 140 ಕಂದಾಯ ಪ್ರಕರಣಗಳು, 45



ವಿವಿಧ ಬ್ಯಾಂಕ್ ಪ್ರಕರಣಗಳು ಸೇರಿ ರೂ.1,00,98,000/- ಮೊತ್ತದ ಪ್ರಕರಣಗಳು ರಾಜಿ ಸಂಧಾನ ಮಾಡಲಾಗಿದೆ.

ಲಕ್ಷೇಶ್ವರದ ಲೋಕ ಅದಾಲತ್‌ನಲ್ಲಿ 2 ಬೆಂಚ್‌ಗಳನ್ನು ಮಾಡಲಾಗಿತ್ತು, ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ತಾಲೂಕ ಕಾನೂನು ಸೇವಾ ಸಮಿತಿ ಅಧ್ಯಕ್ಷರಾದ ಸರ್ವಮಂಗಳ ಕೆ.ಎಂ. ಮತ್ತು ಕಿರಿಯ ದಿವಾಣಿ ನ್ಯಾಯಾಧೀಶರಾದ ಅಪ್ಪಾಸಾಬ ನಾಯಿಕ ಪ್ರಕರಣಗಳನ್ನು ಇತ್ಯರ್ಥಗೊಳಿಸಿದರು. ಪಟ್ಟಣದ ಹಿರಿಯ ದಿವಾಣಿ ನ್ಯಾಯಲಯದಲ್ಲಿ ವಿವಾಹ ವಿಚ್ಛೇಧನಕ್ಕಾಗಿ ಅರ್ಜಿ ಸಲ್ಲಿಸಿ ನ್ಯಾಯಾಲಯಕ್ಕೆ ಅಲೆದಾಡುತ್ತಿದ್ದ ಗಂಡ ಹೆಂಡತಿಯರನ್ನು ಲೋಕ ಅದಾಲತ್‌ನಲ್ಲಿ ▶▶3ನೇ ಪುಟಕ್ಕೆ

## ಅಭ್ಯರ್ಥಿಗಳಿಗೆ ಸಂದರ್ಶನ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಹೊಸದಾಗಿ (ಪ್ಯಾರಾ ಲೀಗಲ್ ವಾಲಂಟಿಯರ್ಸ್) ಅರೆಕಾಲಿಕ ಸ್ವಯಂ ಸೇವಕರಾಗಿ ಕಾರ್ಯನಿರ್ವಹಿಸಲು ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಜುಲೈ 15 ರಂದು ಮುಂಜಾನೆ 10 ಗಂಟೆಗೆ ಜಿಲ್ಲಾ ನ್ಯಾಯಾಲಯದ ಸಂಕೀರ್ಣದಲ್ಲಿರುವ ಎ.ಡಿ.ಆರ್. ಕಟ್ಟಡ (ಪರಿಹಾರ ವ್ಯಾಜ್ಯಗಳ ಪರಿಹಾರ ಕೇಂದ್ರ) ದಲ್ಲಿರುವ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಕಚೇರಿಯಲ್ಲಿ ಸಂದರ್ಶನ ಕರೆಯಲಾಗಿದೆ. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಈಗಾಗಲೇ ಪತ್ರ ಮುಖೇನ, ದೂರವಾಣಿ ಮುಖೇನ ತಿಳಿಸಲಾಗಿದ್ದು, ಅಭ್ಯರ್ಥಿಗಳು ನಿಗದಿತ ಸಮಯಕ್ಕೆ ಸಂದರ್ಶನಕ್ಕೆ ಹಾಜರಾಗಲು ತಿಳಿಸಿದೆ. ಸಂದರ್ಶನಕ್ಕೆ ಹಾಜರಾಗಲು ಯಾವುದೇ ಪ್ರಯಾಣ ಭತ್ಯೆ, ಇತರೆ ಯಾವುದೇ ಭತ್ಯೆ ಇರುವುದಿಲ್ಲ. ಸಂದರ್ಶನಕ್ಕೆ ಬರುವಾಗ ಒಂದು ಸ್ಟಾಂಪ್ ಸೈಜ್ ಫೋಟೋ ಹಾಗೂ ತಮ್ಮ ಆಧಾರ ಕಾರ್ಡ್ ಪ್ರತಿ ಅಥವಾ ಯಾವುದೇ ಗುರುತಿನ ಪತ್ರದ ಝರಾಕ್ಷ ಪ್ರತಿಯೊಂದಿಗೆ ಹಾಜರಾಗಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ. ಗುರುಪ್ರಸಾದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಕ್ಷರದಾಸೋಹ ಸಿಬ್ಬಂದಿಗಳ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರಕ್ಕೆ ಮನವಿ ಸಲ್ಲಿಕೆ

# ಕನಿಷ್ಠ! ವೇತನ ಜಾರಿಗೊಳಿಸಿ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸರ್ಕಾರಿ ಶಾಲೆಯ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಸಿದ್ಧಪಡಿಸುವ ಅಕ್ಷರದಾಸೋಹ ಸಿಬ್ಬಂದಿಗಳ ಕನಿಷ್ಠ ವೇತನ ಜಾರಿಯೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮಂಗಳವಾರ ತಾಲೂಕ ಪಂಚಾಯತ ಅಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಸರ್ಕಾರವೇ ಘೋಷಿಸಿದಂತೆ ಮಾಸಿಕ ವೇತನ 21 ಸಾವಿರ ರೂ.ಗಳಿಗೆ ಹೆಚ್ಚಿಸಬೇಕು. ಮುಖ್ಯ ಅಡಿಗೆಯವರಿಗೆ ಬಿಸಿಯೂಟದ ಜವಾಬ್ದಾರಿ ನೀಡಬೇಕು. ಶಾಲಾ ರಜಾ ದಿನಗಳಲ್ಲಿ ವೇತನ, ಬಿಸಿಯೂಟ ಯೋಜನೆಯನ್ನು ಸರ್ಕಾರವೇ ನಿರ್ವಹಿಸಬೇಕು. ನೌಕರರನ್ನು ಡಿ ಗ್ರುಪ್ ನೌಕರರೆಂದು ಪರಿಗಣಿಸಬೇಕು. 60ನೇ ವರ್ಷದಲ್ಲಿ ನಿವೃತ್ತಿ ಹೊಂದುವವರಿಗೆ 1 ಲಕ್ಷ ರೂ. ಪರಿಹಾರ ▶▶3ನೇ ಪುಟಕ್ಕೆ

ಅಕ್ಷರ ದಾಸೋಹ ಯೋಜನೆಯಡಿ ರಾಜ್ಯದಲ್ಲಿ 1.21 ಲಕ್ಷ ಬಿಸಿಯೂಟ ತಯಾರಕ ಸಿಬ್ಬಂದಿಗಳಿದ್ದಾರೆ. ಅವರಿಗೆ ಸದ್ಯ ಮಾಸಿಕ 3600 ರೂ. ಮಾತ್ರ ನೀಡಲಾಗುತ್ತಿದೆ. ತಿಂಗಳ ವೇತನ ಲೆಕ್ಕ ಹಾಕಿದರೆ ದಿನಕ್ಕೆ 120 ರೂ. ಮಾತ್ರ ಕೂಲಿ ತಗಲುತ್ತದೆ. ರಾಜ್ಯದಲ್ಲಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನೀಡಲಾಗುವ ದಿನದ ಕೂಲಿಯನ್ನೇ 316 ರೂ.ಗಳಿಗೆ ನಿಗದಿಪಡಿಸಲಾಗಿದೆ. ರಾಜ್ಯ ಸರ್ಕಾರವೇ ಕನಿಷ್ಠ ವೇತನವನ್ನು 15 ಸಾವಿರ ರೂ.ಗಳಿಗೆ ನಿಗದಿಪಡಿಸಿರುವಾಗ ಯಾವ ಮಾನದಂಡದ ಆಧಾರದ ಮೇಲೆ ಮಾಸಿಕ 3600 ರೂ. ವೇತನ ನೀಡುತ್ತಿದೆ ಎಂದು ಸಿಬ್ಬಂದಿಗಳು ಪ್ರಶ್ನಿಸಿದರು.

## ಇಂದು ರಾಹುಲ್ ಗಾಂಧಿ ಬೆಂಬಲಿಸಿ ಕಾಂಗ್ರೆಸ್‌ನಿಂದ ಸತ್ಯಾಗ್ರಹ

■ ವಿಜಯಸಾಕ್ಷಿ ಸುದ್ದಿ, ಗದಗ

ಎಐಸಿಸಿ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ಅವರಿಗೆ ನೀಡಿರುವ ಶಿಕ್ಷೆ ಹಾಗೂ ಅನರ್ಹತೆ ಖಂಡಿಸಿ, ಅವರಿಗೆ ಆತ್ಮಸ್ಥೈರ್ಯ ತುಂಬಲು ಹಾಗೂ ಅವರ ಜೊತೆಗೆ ನಾವಿದ್ದೇವೆ ಎಂಬುದಾಗಿ ಬೆಂಬಲ ಸೂಚಿಸಲು ಕೆಪಿಸಿಸಿ ಅಧ್ಯಕ್ಷ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ ಆದೇಶದ ಮೇರೆಗೆ ನಗರದ ಮಹಾತ್ಮ ಗಾಂಧಿ ವೃತ್ತದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ, ಗದಗ-ಬೆಟಗೇರಿ ಶಹರ ಕಾಂಗ್ರೆಸ್ ಸಮಿತಿ, ಮುಳುಗುಂದ ಬ್ಲಾಕ್ ಕಾಂಗ್ರೆಸ್ ಸಮಿತಿ ಹಾಗೂ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಜು. 12ರಂದು ಬೆಳಿಗ್ಗೆ 10ರಿಂದ ಸಂಜೆ 5ರ ವರೆಗೆ ಒಂದು ದಿನದ ಮೌನ ಸತ್ಯಾಗ್ರಹ ನಡೆಯಲಿದೆ.

ರಾಹುಲ್ ಗಾಂಧಿ ಅವರು ವಿವಿಧ ವೇದಿಕೆಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಆದಾನಿ ನಡುವಿನ ಸಂಬಂಧವನ್ನು ನೇರವಾಗಿ ಪ್ರಶ್ನಿಸುತ್ತ ಬಂದಿದ್ದಾರೆ. ರಾಹುಲ್ ಗಾಂಧಿ ಅವರ ಇಂತಹ ನಿರ್ಭೀತಿ ನಡೆಯನ್ನು ಸಹಿಸಿಕೊಳ್ಳಲಾಗದ ಪ್ರಧಾನಿ ಹಾಗೂ ಬಿಜೆಪಿ ಮುಖಂಡರು ಲೋಕಸಭೆ ಸದಸ್ಯ ಸ್ಥಾನದಿಂದ ಅನರ್ಹಗೊಳಿಸಿದ್ದಲ್ಲದೇ ಸೇಡಿನ ಕ್ರಮ ಅನುಸರಿಸುತ್ತಿದೆ. ಇಷ್ಟೆಲ್ಲ ಅಡಚಣೆಗಳ ನಡುವೆಯೂ ರಾಹುಲ್ ಗಾಂಧಿ ಅವರು ಜನಸಾಮಾನ್ಯರ ಒಳಿತಿಗಾಗಿ, ನ್ಯಾಯ ಸತ್ಯಕ್ಕಾಗಿ ಮತ್ತು ಜನರ ಸಮಸ್ಯೆಗಳನ್ನು ಎತ್ತಿಹಿಡಿಯಲು ನಿರಂತರವಾಗಿ ಹೋರಾಟ ▶▶3ನೇ ಪುಟಕ್ಕೆ

# ಆರೋಪಿಗೆ ಶಿಕ್ಷೆ ಪ್ರಕಟ

**■ವಿಜಯಸಾಕ್ಷಿ ಸುದ್ದಿ, ಗದಗ**

ನರಗುಂದ ತಾಲೂಕಿನ ಕೊಣ್ಣೂರ ಗ್ರಾಮದ ಬಸವೇಶ್ವರ ದೇವಸ್ಥಾನದ ಬಳಿ 8-3-2016ರಂದು ರಾತ್ರಿ 8.15ರ ಸುಮಾರಿಗೆ ಅಕ್ರಮವಾಗಿ, ತನ್ನ ಸ್ವಂತ ಲಾಭಕ್ಕೋಸ್ಕರ ಮಾರಾಟ ಮಾಡುವ ಉದ್ದೇಶದಿಂದ ಸುಮಾರು 1 ಕೆಜಿ 900 ಗ್ರಾಂ ಗಾಂಜಾವನ್ನು ಆರೋಪಿತ ಶಾರದಾ ಭೀಮಪ್ಪ ಮರ್ಚೆಪ್ಪನವರ ತನ್ನ ಬಳಿ ಇಟ್ಟುಕೊಂಡಿದ್ದಾಗ ಸಿಕ್ಕಿಬಿದ್ದಿದ್ದು, ಸದರಿ ಅಪರಾಧದ ಕುರಿತು ಆರೋಪಿತಳ ವಿರುದ್ಧ ಗದಗ ಉಪ ವಿಭಾಗದ ಅಬಕಾರಿ ನಿರೀಕ್ಷಕ ಮಲ್ಲಿಕಾರ್ಜುನ ತನಿಖೆ ಪೂರೈಸಿ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು.

ಪ್ರಕರಣಕ್ಕೆ ಸಂಬಂಧಿಸಿ ಸಾಕ್ಷಿ ವಿಚಾರಣೆ ನಡೆಸಿದ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ರಾಜೇಶ್ವರ ಎಸ್ ಶೆಟ್ಟಿ, ಸದರಿ ಪ್ರಕರಣದಲ್ಲಿ ಆರೋಪ ಸಾಬೀತಾಗಿದ್ದರಿಂದ ಆರೋಪಿತಳಾದ ಶಾರದಾ ಭೀಮಪ್ಪ ಮರ್ಚೆಪ್ಪನವರ ಇವಳಿಗೆ ಜುಲೈ 4ರಂದು ಕಲಂ 8(ಸಿ), 20(ಬಿ)(2)(ಬಿ) ಎನ್‌ಡಿಪಿಎಸ್ ಕಾಯ್ದೆಯಡಿ 4 ವರ್ಷ ಕಠಿಣ ಶಿಕ್ಷೆ ಹಾಗೂ 25 ಸಾವಿರ ರೂ ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಪ್ರಕರಣದಲ್ಲಿ ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಎಂ ಬಿ ದೊಡ್ಡಗೌಡ್ರ ಸಾಕ್ಷಿ ವಿಚಾರಣೆ ನಡೆಸಿ ವಾದ

# ವಿಧಾನಸೌಧಕ್ಕೆ ಹೈಟೆಕ್ ಭದ್ರತೆಗೆ ಮುಂದಾದ ಸರ್ಕಾರ

**■ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ನಗರದ ಹೃದಯ ಭಾಗದಲ್ಲಿರುವ ವಿಧಾನಸೌಧದಲ್ಲಿ ಒಂದೇ ವಾರದಲ್ಲಿ ಎರಡು ಬಾರಿ ಭದ್ರತಾ ಲೋಪ ಕಂಡು ಬರುತ್ತಿದ್ದಂತೆ ಎಚ್ಚೆತ್ತುಕೊಂಡಿರುವ ರಾಜ್ಯ ಸರ್ಕಾರ, ಹೈಟೆಕ್ ಬಿಗಿ ಭದ್ರತೆ ಒದಗಿಸಲು ಸಜ್ಜಾಗಿದ್ದು, ಮುಂದಿನ ಎರಡು ವಾರದಲ್ಲಿ ಪಾರ್ಲಿಮೆಂಟ್ ರೀತಿಯಲ್ಲಿ ಭದ್ರತೆ ಕೈಗೊಳ್ಳಲು ನಿರ್ಧರಿಸಿದೆ.

ಸದನದ ಒಳಕ್ಕೆ ಅಪರಿಚಿತ ವ್ಯಕ್ತಿಯೊಬ್ಬರು ಬಂದು ಕೂತ ಘಟನೆ ಹೊರ ಬೀಳುತ್ತಿದ್ದಂತೆ ಭದ್ರತಾ ಲೋಪದ ಬಗ್ಗೆ ಭಾರೀ ಚರ್ಚೆಯಾಗಿತ್ತು. ಸಿಎಂ ಸಿದ್ದರಾಮಯ್ಯನವರ ಬಜೆಟ್ ಮಂಡನೆ ದಿನವೇ ಈ ಪ್ರಮಾದ ನಡೆದಿತ್ತು. ಇದರ ಬೆನ್ನಲ್ಲೇ, ಸೋಮವಾರ ಮಹಿಳೆಯೊಬ್ಬರು ಬ್ಯಾಗ್‌ನಲ್ಲಿ ಚಾಕು ಇಟ್ಟುಕೊಂಡು ಬಂದು ವಿಧಾನಸೌಧ ಪ್ರವೇಶಿಸಲು ಯತ್ನಿಸಿದ್ದರು.

ಭದ್ರತಾ ಲೋಪದಿಂದ ಮುಜುಗರಕ್ಕೀಡಾದ ರಾಜ್ಯ ಸರ್ಕಾರ ಕೂಡಲೇ ಎಚ್ಚೆತ್ತುಕೊಂಡು ವಿಧಾನಸೌಧ ಜೊತೆಗೆ ವಿಕಾಸಸೌಧಕ್ಕೆ ಹೆಚ್ಚಿನ ಭದ್ರತೆ ನೀಡಲು ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ಪಾರ್ಲಿಮೆಂಟ್‌ನ ತಂತ್ರಜ್ಞಾನ ಬಳಸಲು ಸರ್ಕಾರ ಮುಂದಾಗಿದೆ. ಇದು ಮೂರು ಹಂತಗಳಲ್ಲಿ ಬಿಗಿ ಭದ್ರತೆ ಹೊಂದಿರಲಿದೆ ಎಂದು ಮೂಲಗಳು ತಿಳಿಸಿವೆ.



ಕರ್ನಾಟಕ ರಾಜ್ಯ ಸರಕಾರಿ ನೌಕರ ಸಂಘದ ರಾಜ್ಯ ಉಪಾಧ್ಯಕ್ಷ, ಗದಗ ಜಿಲ್ಲಾ ಸರಕಾರಿ ನೌಕರ ಸಂಘದ ಅಧ್ಯಕ್ಷರಾದ ರವಿ.ಎಲ್. ಗುಂಜೀಕರ ಅವರು ಗದಗ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿಗಳಾಗಿ ಅಧಿಕಾರ ಸ್ವೀಕರಿಸಿರುವ ಹಿನ್ನೆಲೆಯಲ್ಲಿ ಗದಗ ಜಿಲ್ಲಾ ಭೋವಿ ಸಮಾಜದ ಅಧ್ಯಕ್ಷ ಹುಚ್ಚಪ್ಪ ಸಂದಕದ ಮತ್ತು ಮುಂಡರಗಿ ತಾ ಪಂ ಮಾಜಿ ಅಧ್ಯಕ್ಷ ವೆಂಕಪ್ಪ ಬಳ್ಳಾರಿ ನೇತೃತ್ವದಲ್ಲಿ ಸನ್ಮಾನಿಸಿ, ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಹಿರೇವಡ್ಡಟ್ಟಿ ಗ್ರಾ ಪಂ ಅಧ್ಯಕ್ಷ ವೆಂಕಟೇಶ ಗೆಜ್ಜಿ, ಪುರಸಭೆ ಮಾಜಿ ಸದಸ್ಯರಾದ ಪರಶುರಾಮ ಕರಡಿಕೊಳ್ಳ, ಚಿನ್ನಪ್ಪ ವಡ್ಡಟ್ಟಿ ಸೇರಿದಂತೆ ಮುಂಡರಗಿ ಭೋವಿ ಸಮಾಜ ಬಾಂಧವರಿದ್ದರು.



ಮುಂಡರಗಿ ತೋಂಟದಾರ್ಯ ಮಠಕ್ಕೆ ಮಾಜಿ ಸಚಿವ ದಿ. ಎಂ ಪಿ ಪ್ರಕಾಶ ಅವರ ಪುತ್ರಿ, ಹರಪನಹಳ್ಳಿ ಕ್ಷೇತ್ರದ ಶಾಸಕಿ ಲತಾ ಮಲ್ಲಿಕಾರ್ಜುನ್ ಭೇಟಿ ನೀಡಿ ನಿಜಗುಣಪ್ರಭು ತೋಂಟದಾರ್ಯ ಸ್ವಾಮೀಜಿಯವರಿಂದ ಆರ್ಶೀವಾದ ಪಡೆದುಕೊಂಡರು. ಪ್ರಕಾಶಗೌಡ ಪಾಟೀಲ, ಕೋಟ್ರೇಶ ಅಂಗಡಿ, ಪಾಟಂಕ್ಷಿ ಗಣದಿನ್ನಿ, ಪವನ್ ಚೋಪ್ರಾ, ಪತ್ರಕರ್ತ ಹು ಬ ವಡ್ಡಟ್ಟಿ, ಪ್ರವಚನ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

### ಕಾಲಕ್ಕೆ ತಕ್ಕಂತೆ ಬದಲಾದ ಹಲವು ಪಾತ್ರಗಳಿಗಿನ್ನು ಜೀವವಿಲ್ಲ

# ಬಳೆಗಾರ ಚೆನ್ನಯ್ಯ ಬಾಗಿಲಿಗೆ ಬರಲೊಲ್ಲ....

'ಬಳೆಗಾರ ಚೆನ್ನಯ್ಯ ಬಾಗಿಲಿಗೆ ಬಂದಿಹನು ಒಳಗೆ ಬರಲಪ್ಪಣೆಯೇ ದೊರೆಯೇ...' ಅಂಥದ್ದೊಂದು ಕಾಲವಿತ್ತಲ್ಲ? ತಲೆಗೊಂದು ಕೆಂಪು ಮುಂಡಾಸು ಸುತ್ತಿ ಹುರಿ ಮೀಸೆಯನ್ನು ಮತ್ತಷ್ಟು ಸುತ್ತಿ ಬಿಗಿಗೊಳಿಸಿಕೊಂಡು ಎರಡೂ ಭುಜದ ಮೇಲೆ ಮಣಭಾರದ ರಂಗುರಂಗಿನ ಥರಾವರಿ ಅಳತೆಯ ಬಳೆಯ ಗೊಂಚಲನ್ನು ಹೇರಿಕೊಂಡು ಮನೆ ಮನೆಗೆ ಬರುತ್ತಿದ್ದ ಬಳೆಗಾರ. ಮನೆಯಂಗಳದ ತುದಿಯಲ್ಲಿಯೇ ಮೆಟ್ಟಿಕೊಂಡಿದ್ದ ಚರ್ಮದ ಚಪ್ಪಲಿಯನ್ನು ಕಳಚಿಟ್ಟು ಜಗುಲಿಯ ಕಟ್ಟೆಯ ಮೇಲೆ ಅಷ್ಟೊಂದು ಬಳೆಗಳಿದ್ದರೂ ನಾಜೂಕಾಗಿ ಸದ್ದು ಆಗದಂತೆ ನಿಧಾನವಾಗಿ ಬಳೆಯ ಪರ್ವತವನ್ನು ಇಳಿಸಿ 'ಉಸ್ಸಪ್ಪಾ' ಎಂದು ನಿಟ್ಟುಸಿರಾಗಿ ಅಲ್ಲೇ ಪಕ್ಕದಲ್ಲಿ ಕುಳಿತು 'ಅಮ್ಮಾ....ಬಳೆಗಾರ ....'ಎನ್ನುತ್ತಿದ್ದಂತೆಯೇ ಅಡುಗೆ ಮನೆಯಲ್ಲಿ ಪಾತ್ರೆಗಳೊಂದಿಗೆ ಹೆಣಗಾಡುತ್ತಿದ್ದ 'ಅಮ್ಮ' ಉಗುಬಗೆಯಿಂದ ಓಡಿಬಂದು 'ಬಳೆಗಾರ ಯಾವ್ ಕಡೆಯಿಂದ ಬಂದ್ರೋ?' ಎಂದು ಕಷ್ಟ ಸುಖಗಳನ್ನು ವಿಚಾರಿಸಿ ಬಾಯಾರಿಕೆಗೊಂದಿಷ್ಟು ಆಸರಿಗೆ ನೀಡಿ ಮನೆಯ ಇತರ ಹೆಣ್ಣು ಮಕ್ಕಳನ್ನೂ ಕರೆದು ಕೂರಿಸಿಕೊಂಡು ಬಳೆಗಾರ ತಂದ ಬಳೆಗಳನ್ನು ಆಯ್ಕೆಮಾಡಿ ತೊಡಿಸಿಕೊಳ್ಳುತ್ತಿದ್ದ ಕಾಲ.

ಬಳೆಗಾರನೂ ಅಷ್ಟೇ. ನಿಮ್ಮ ತಂಗೀ ಮನೆಗೆ ಹೋಗಿದ್ದೆ ಅಮ್ಮಾರೇ...ಮೊನ್ನೆ ನಿಮ್ ಭಾವನೋರು ಸಿಕ್ಕಿದ್ರು ಎಂದೆಲ್ಲ ಬಾತ್ಮಿ ಒಪ್ಪಿಸುತ್ತ ಮನೆಯ ಹೆಣ್ಣುಮಕ್ಕಳ ಮೊಗದಲ್ಲಿ ಸಂಭ್ರಮದ ನಗೆ ತರಿಸುತ್ತಿದ್ದ. ಆತನಿಗೂ ಅಷ್ಟೇ. ಇಡೀ ಊರಲ್ಲಿ ಗೊತ್ತಿಲ್ಲದ ಮನೆಯಿಲ್ಲ. ಅಪರಿಚಿತವೆಂಬ ಜೀವವಿಲ್ಲ. ಯಾರ್ಯಾರಿಗೆ ಯಾರ್ಯಾರು ನೆಂಟರೆಂಬುದರಿಂದ



ಹಿಡಿದು ಯಾವ ಮನೆಯ ಹೆಣ್ಣು ಮಗಳನ್ನು ಯಾವ ಗಂಡು ಗೋವಿಗೆ ಗಂಟು ಹಾಕಿದ್ದಾರೆ ಮತ್ತು ಹಾಕುತ್ತಾರೆ ಎಂಬಲ್ಲಿಯವರೆಗಿನ ವಿಷಯವೂ ಗೊತ್ತು. ಟಿ.ವಿ., ವೃತ್ತಪತ್ರಿಕೆಗಳ ಪರಿಚಯವೇ ಇಲ್ಲದ ಅಂದಿನ ಮಹಿಳೆಯರಿಗೆ ಈ ಬಳೆಗಾರನೇ ಸುದ್ದಿಗಾರ. ವಾರ್ತಾ ವಾಚಕ. ಊರೆಲ್ಲ ಸುತ್ತುತ್ತ ತಿಂಗಳಿಗೊಮ್ಮೆ ಬರುತ್ತಿದ್ದ ಬಳೆಗಾರ ನಿಗದಿತ ಸಮಯಕ್ಕೆ ಬರಲಿಲ್ಲವೆಂದರೆ ಈ ಹೆಣ್ಣುಮಕ್ಕಳಿಗೂ ಎಂಥದೋ ಸಂಕಟ. ನಿನ್ನೆಯೇ ಬರಬೇಕಿತ್ತು. ಇಂದಾದರೂ ಬಂದಾನು ಎಂಬ ನಿರೀಕ್ಷೆ.

ಹಾಗೆಂದು ಆತನೇನೂ ಅನ್ಯ ಅಪೇಕ್ಷೆಯಿಂದ ಅಥವಾ ತನ್ನ ವ್ಯಾಪಾರ ಹೆಚ್ಚಿಸಿಕೊಳ್ಳುವ ಸಲುವಾಗಿಯೋ ಹೀಗೆ ಒಬ್ಬರ ಮನೆಯ ಸುದ್ದಿಯನ್ನು ಒಬ್ಬರಿಗೆ ಒಪ್ಪಿಸುತ್ತಿದ್ದ ಎಂದಲ್ಲ. ಅಂಥ ಒಂದು ಮನೆ ಮುರಿಯುವ ಸುದ್ದಿಗಳನ್ನು ಆತ ಒಬ್ಬರಿಂದೊಬ್ಬರ ಕಿವಿಗೆ ತಲುಪಿಸುತ್ತಲೂ ಇರಲಿಲ್ಲವೆನ್ನಿ. ಮನೆಯ ಹೆಣ್ಣುಮಕ್ಕಳಿಗೆ ಬೇಕು ಬೇಕಾದ ಬಳೆಗಳನ್ನು ತೊಡಿಸಿ ಬಳೆಯ ಮೊತ್ತವನ್ನು ಪಡೆದು ಹಾಗೆಯೇ ಮುಂದಿನ ಮನೆಗೆ ತೆರಳುತ್ತಿದ್ದ ಬಳೆಗಾರ ಇಂದು ಮರೆಯಾಗಿದ್ದಾದರೂ ಎಲ್ಲಿಗೆ? ಕಾಲ ಬದಲಾಯಿತಾ? ಬಳೆಗಾರ ಬದಲಾದನಾ? ಅಥವಾ ಬದಲಾಗಿದ್ದು ನಮ್ಮ ಮನೆಯ ಹೆಣ್ಣು ಮಕ್ಕಳಾ? ಸ್ಪಷ್ಟ ಉತ್ತರ ಹುಡುಕುವದು ಕಷ್ಟ. ಮೇಲ್ನೋಟಕ್ಕೆ ಬಯಲಾಗುವದು, ನಮ್ಮ ಹೆಣ್ಣು ಮಕ್ಕಳು ಮಾರ್ಡರ್ನೇಟ್ ಆಗಿಬಿಟ್ಟರೆಂಬ ಸತ್ಯ. ಅದೇ ಮಾರ್ಡರ್ನೇಟ್‌ನ ಹೆಸರಲ್ಲಿ ಇಂಥ ಸಂಭ್ರಮವನ್ನು ಮಿಸ್ ಮಾಡಿಕೊಳ್ಳುತ್ತಿದ್ದಾರೆಂಬ ಕಟುಸತ್ಯ. ಪಟ್ಟಣದ 'ಆಂಟಿ'ಯರ ಸುದ್ದಿ ಬಿಡಿ. ನಮ್ಮ ಹಳ್ಳಿಗಳ ಅತ್ತಿಗೆಯಂದಿರಿಗೆ ಏನಾಯಿತು? ಹೊಸ ವಿನ್ಯಾಸದ ಬಳೆಗಳತ್ತ ಒಲವು ತೋರಿದ ಇವರು ಈಗೀಗ ಎರಡೂ ಕೈ ಸೇರಿ ಒಂದೇ ಬಳೆ. ಇಲ್ಲವೆಂದರೆ ಅದೂ ಇಲ್ಲ. ದಶಕದಿಂದೀಚೆಗೆ ಹಳ್ಳಿಯ ದಾರಿ ಸವೆಸಲು ಭಾರವೆನಿಸಿದ ಬಳೆಗಾರ ಸುಮ್ಮನಾಗಿಬಿಟ್ಟ. ಮನೆಮನೆಗೆ ಟೆಲಿಫೋನು ದಾಂಗುಡಿಯಿಟ್ಟ ನಂತರ ಮತ್ತೆ ಆ ಬಳೆಗಾರನ ಸುದ್ದಿ ವಾಚನಕ್ಕಾಗಿ ತಿಂಗಳಾನುಗಟ್ಟಲೆ ಕಾಯುವ ಜರೂರತ್ತಾರೂ ಏನಿದೆ ಈ ಹೆಣ್ಮಕ್ಕಳಿಗೆ? ಥರಾವರಿ ಬಣ್ಣದ, ಡಿಸೈನಿನ, ಒಡೆಯದ ಬಳೆಗಳತ್ತ ವಾಲಿದ ಹೆಣ್ಣು ಜೀವಗಳಿಗೆ ಆ ಬಳೆಗಾರ ತರುವ ಅಜ್ಜಿಯ ಕಾಲದ ಹಸಿರು ಗಾಜಿನ ಬಳೆ ಮೆಚ್ಚೀತಾ?

ದಿನಕಳೆದಂತೆ ಬಳೆಗಾರ ಮನೆಯಂಗಳಕ್ಕೆ ಬಂದು ಕೂತರೂ 'ಮೊನ್ನೆ ಪೇಟೆಗೆ ಹೋದಾಗ್ಲೇ ಬಳೆ ಇಟ್ಕಂಡು ಬಂದ್ವಲ್ಲೋ ಮಾರಾಯಾ. ...'ಎನ್ನತೊಡಗಿದರು. ಬಳೆಗಾರ ಸುತ್ತಿ ಸುತ್ತಿ ಸುಸ್ತಾದನೇ ಹೊರತು ತುತ್ತಿನ ಚೀಲ ತುಂಬುವಷ್ಟು ವ್ಯಾಪಾರವಿಲ್ಲದಂತಾಯ್ತು. ಹೆಣ್ಮಕ್ಕಳು ಹೊಸ ವಿಧದ ಬಳೆಗೆ ಅಡಿಕ್ಟ್ ಆಗಿಯೇಬಿಟ್ಟರು. ಆ ಬಳೆಗಾರನ ಕಥೆ ಏನಾಯ್ತೋ.... ಕೊಂಚ ಕೇಳಿಬಿಡೋಣವೆಂದರೆ ಬಳೆಗಾರ ವಂಶದವರೂ ಕಣ್ಣಿಗೆ ಬೀಳುತ್ತಿಲ್ಲ. ಹೊಟ್ಟೆಪಾಡಿಗೆ ಬೇರಾವುದೋ ವ್ಯಾಪಾರ ನೆಚ್ಚಿಕೊಂಡಿರಬಹುದು. ಅವರದೇ ಮಕ್ಕಳು ಇನ್ನಾವುದೋ ಉದ್ಯೋಗ ಪ್ರಾರಂಭಿಸಿರಬಹುದು. ಮತ್ತೆ ಆ ಬಳೆಗಾರನ ಪಾತ್ರಕ್ಕೆ ಬಣ್ಣ ತುಂಬುವವರಾರೂ ಇಲ್ಲ ಬಿಡಿ. ಹಾಗಾದರೆ ಕಾಲವೇ ಬದಲಾಯಿತೆನ್ನುತ್ತೀರಾ?

**– ಅಲೆಮಾರಿ.**

### 3 ತಂಡಗಳಲ್ಲಿ ಸ್ತ್ರೀ-ಪುರುಷರಿಗಾಗಿ ಪ್ರತ್ಯೇಕವಾಗಿ ಯೋಗಾಸನ ಕ್ರೀಡಾ ಸ್ಪರ್ಧೆ

# ಜಿಲ್ಲಾ ಮಟ್ಟದ ಯೋಗಾಸನ ಕ್ರೀಡಾ ಚಾಂಪಿಯನ್‌ಶಿಪ್

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಜಿಲ್ಲಾ ಅಮೆಚೂರ್ ಯೋಗ ಕ್ರೀಡಾ ಸಂಸ್ಥೆ ಇವರು ಗದಗ ಜಿಲ್ಲಾ ಯೋಗ ಒಕ್ಕೂಟ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಗದಗ ಇವರುಗಳ ಸಹಯೋಗದಲ್ಲಿ ವಿಶ್ವ ಅರ್ಹತೆ(ಆರೋಗ್ಯ) ದಿನಾಚರಣೆ ಮತ್ತು ವಿಜಯಪುರದಲ್ಲಿ ಜುಲೈ 29, 30ರಂದು ನಡೆಯಲಿರುವ ಕರ್ನಾಟಕ ರಾಜ್ಯ ಮಟ್ಟದ ಯೋಗಾಸನ ಕ್ರೀಡಾ ಚಾಂಪಿಯನ್‌ಶಿಪ್ ಸ್ಪರ್ಧೆಗಳಿಗೆ ಜಿಲ್ಲಾ ಕ್ರೀಡಾಪಟುಗಳ ಆಯ್ಕೆ ಪ್ರಯುಕ್ತ 26ನೇ ಗದಗ ಜಿಲ್ಲಾ ಮಟ್ಟದ ಯೋಗಾಸನ ಕ್ರೀಡಾ ಚಾಂಪಿಯನ್‌ಶಿಪ್ ಸ್ಪರ್ಧೆಗಳನ್ನು ಆಯೋಜಿಸಿದೆ.

ಸ್ಪರ್ಧೆಗಳು ಜುಲೈ 16ರ ಬೆಳಿಗ್ಗೆ 9 ಗಂಟೆಗೆ ಬಸವ ಯೋಗ ಮಂದಿರ (ಬಸವ ಪ್ರಭೆ ಕ್ಯಾಂಪಸ್) ಸಿದ್ಧಲಿಂಗ ನಗರ ಗದಗ ಇಲ್ಲಿ ನಡೆಯಲಿವೆ. ಸ್ಪರ್ಧಿಗಳ ವಯೋಮಿತಿ (8,14, 14-18 ಮತ್ತು 18 ವರ್ಷ ಮೇಲ್ಪಟ್ಟು) ಆಧಾರದ ಮೇಲೆ ಸಬ್ ಜ್ಯೂನಿಯರ್, ಜ್ಯೂನಿಯರ್, ಸೀನಿಯರ್ ಎಂದು 3 ತಂಡಗಳಲ್ಲಿ ಸ್ತ್ರೀ-ಪುರುಷರಿಗಾಗಿ ಪ್ರತ್ಯೇಕವಾಗಿ ನಡೆಸಲಾಗುವುದು.

ಸ್ಪರ್ಧೆಯಲ್ಲಿ ಭಾಗವಹಿಸಿದ ಸ್ಪರ್ಧಿಗಳು ಆಯಾ ಗ್ರುಪ್‌ನವರಿಗೆ ನಿಗದಿಪಡಿಸಿದ 10 ಆಸನಗಳನ್ನು ಸ್ಪರ್ಧಾ ಸಮಯದಲ್ಲಿ ಪ್ರದರ್ಶಿಸಬೇಕು ಮತ್ತು ಆಸನದ ಅಂತಿಮ ಸ್ಥಿತಿಯಲ್ಲಿ 10-15 ಸೆಕೆಂಡ್ ಕಾಲ ಸ್ಥಿರವಾಗಿರಬೇಕು. ಸ್ಪರ್ಧೆಯಲ್ಲಿ ವಿಜೇತರಾಗಿ 1, 2, 3ನೇ ಸ್ಥಾನ ಪಡೆದವರಿಗೆ ಮೆಡಲ್ ಹಾಗೂ ಮೆರಿಟ್ ಸರ್ಟಿಫಿಕೇಟ್, 4, 5, 6ನೇ ಸ್ಥಾನ ಪಡೆದವರಿಗೆ ಮೆರಿಟ್ ಸರ್ಟಿಫಿಕೇಟ್ ಮತ್ತು ಭಾಗವಹಿಸಿದವರಿಗೆ ಪ್ರಮಾಣ ಪತ್ರಗಳನ್ನು ನೀಡಲಾಗುವುದು.

ಸ್ಪರ್ಧೆಯಲ್ಲಿ ಭಾಗವಹಿಸುವವರು ಸ್ಪರ್ಧೆಗಳು ಪ್ರಾರಂಭಗೊಳ್ಳುವ ಮುನ್ನ ನಿಗದಿತ ಪ್ರವೇಶ ಪತ್ರ ಮತ್ತು ಪ್ರವೇಶ ಫೀ ರೂ. 100 ಹಾಗೂ ಆಧಾರ್ ಕಾರ್ಡ್(ಝರಾಕ್ಸ್ ಪ್ರತಿ)ಗಳ ಮೂಲಕ ಸ್ಪರ್ಧೆ ನಡೆಯುವ ಸ್ಥಳದಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು. ಗದಗ ಜಿಲ್ಲೆಯ ಯೋಗಾಸನ ಕ್ರೀಡಾಸಕ್ತರು ಸ್ಪರ್ಧೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಗದಗ ಜಿಲ್ಲಾ ಅಮೆಚೂರ್ ಯೋಗ ಕ್ರೀಡಾ ಸಂಸ್ಥೆ ಅಧ್ಯಕ್ಷ ಕೆ ಎಸ್ ಪಲ್ಲೇದ ಮತ್ತು ಗದಗ ಜಿಲ್ಲಾ ಯೋಗ ಒಕ್ಕೂಟದ ಅಧ್ಯಕ್ಷ ಎಂ ಎಸ್ ಶಿರಿಯಣ್ಣವರ ವಿನಂತಿಸಿದ್ದು, ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ-9448317188, 8310252079, 7676442231, 8088357486 ಸಂಪರ್ಕಿಸುವಂತೆ ಕೋರಿದ್ದಾರೆ.

# ಇಂದು ಮನೆ ಕನ್ನಡ-ಮನ ಕನ್ನಡ ಕಾರ್ಯಕ್ರಮ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಜು.12ರ ಬುಧವಾರ ಸಂಜೆ 6ಕ್ಕೆ ಪಟ್ಟಣದ ಪುರಸಭೆಯ ಹಿಂಭಾಗದ ಎನ್.ಆರ್ ಸಾತಪುತೆ ಅವರ ಮನೆಯಂಗಣದಲ್ಲಿ ಮನೆ ಕನ್ನಡ-ಮನ ಕನ್ನಡ ಸಾಹಿತ್ಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಹಾನಗಲ್‌ನ ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ವಿ ಸಾಲಿಮಠ ಮಹಾಶರಣ ದಂಪತಿ ಹರಳಯ್ಯ ಮತ್ತು ಕಲ್ಯಾಣಮ್ಮ ಕುರಿತು ಉಪನ್ಯಾಸ ನೀಡುವರು. ನಿ.ದೈಹಿಕ ಪರಿವೀಕ್ಷಕ ಎನ್.ಆರ್ ಪಂಚಭಾವಿ ಉದ್ಘಾಟಿಸುವರು. ಸಾಹಿತಿಗಳಾದ ಪೂರ್ಣಾಜ ಖರಾಟೆ, ಎಸ್.ಕೆ ಅಮ್ಮಿನಭಾವಿ, ಬಿ. ಎಮ್.ಹೂಗಾರ, ಎಂ.ಜೆ. ಕುರುವಿನಶೆಟ್ಟಿ, ಘಟಕದ ಪದಾಧಿಕಾರಿಗಳು ಉಪಸ್ಥಿತರಿರುವರು. ತಾಲೂಕಾ ಕಸಾಪ ಅಧ್ಯಕ್ಷ ಈಶ್ವರ ಮೆಡ್ಲೇರಿ ಅಧ್ಯಕ್ಷತೆವಹಿಸುವರು. ತಾಲೂಕಾ ಕದಳಿ ಮಹಿಳಾ ವೇದಿಕೆಯ ಸಹೋದರಿಯರು ಕನ್ನಡ ಗಾನ ಪ್ರಸ್ತುತಪಡಿಸುವರು.

# ಜಿಲ್ಲೆಯ ರೈತರಿಗೆ ಬಜೆಟ್‌ನಲ್ಲಿ ಶೂನ್ಯ ಕೊಡುಗೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಮುಖ್ಯಮಂತ್ರಿ ಸಿದ್ದರಾಮಯ್ಯನವರು 14ನೇ ಬಾರಿ ಬಜೆಟ್ ಮಂಡಿಸಿದ್ದಾರೆ. ಸ್ಥಳಿಯ ಶಾಸಕರು ಪ್ರಭಾವಿಯಾಗಿದ್ದರೂ ಗದಗ ಜಿಲ್ಲೆಗೆ ಯಾವುದೇ ಹೇಳಿಕೊಳ್ಳುವಂತಹ ಅನುದಾನ ದೊರೆತಿಲ್ಲ ಎಂದು ಬಿಜೆಪಿ ಮಹಿಳಾ ಮೋರ್ಚಾ ಶಹರ ಘಟಕದ ಪ್ರಧಾನ ಕಾರ್ಯದರ್ಶಿ ಸ್ವಾತಿ ಅಕ್ಕಿ ಬೇಸರ ವ್ಯಕ್ತಪಡಿಸಿದ್ದಾರೆ.



ಗದಗ ಜಿಲ್ಲೆಯ ನೀರಾವರಿ ಕ್ಷೇತ್ರಕ್ಕೆ ಯಾವುದೇ ಕೊಡುಗೆಯನ್ನು ಬಜೆಟ್‌ನಲ್ಲಿ ಮೀಸಲಿರಿಸಿಲ್ಲ. ಈ ಹಿಂದೆ ಸಿ ಸಿ ಪಾಟೀಲರು ಪಿಡಬ್ಲ್ಯೂಡಿ ಸಚಿವರಾಗಿದ್ದಾಗ ಜಿಲ್ಲೆಯಾದ್ಯಂತ ಎಲ್ಲ ರಸ್ತೆಗಳಿಗೆ ಅನುದಾನವನ್ನು ನೀಡಿದ್ದರು. ಆದರೆ, ಈಗಿರುವ ಸರ್ಕಾರ ಜಿಲ್ಲೆಯ ರಸ್ತೆ ಅಭಿವೃದ್ಧಿಗೆ ಯಾವುದೇ ಹಣವನ್ನು ಮೀಸಲಿಟ್ಟಿಲ್ಲ. ಅವಳಿ ನಗರಕ್ಕೆ ಸಮರ್ಪಕವಾದ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಆಗುತ್ತಿಲ್ಲ. ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಿ ಎಂದು ಅಧಿಕಾರಿಗಳಿಗೆ ಸಚಿವರು ಸೂಚಿಸುವುದು ದುರಂತವೇ ಸರಿ ನೀರಿನ ಸಮಸ್ಯೆಯ ಬಗ್ಗೆ ತಿಳಿದಿದ್ದರೂ ಬಜೆಟ್‌ನಲ್ಲಿ ಅನುದಾನವನ್ನು ಮೀಸಲಿರಿಸದಿರುವುದು ವಿಪರ್ಯಾಸದ ಸಂಗತಿ ಎಂದಿದ್ದಾರೆ.

# ಹಡಪದ ಅಪ್ಪಣ್ಣ ಜಯಂತಿ ಆಚರಣೆ

**■ವಿಜಯಸಾಕ್ಷಿ ಸುದ್ದಿ, ಗದಗ**

ತಾಲೂಕಿನ ಕಳಸಾಪೂರ ಗ್ರಾಮದ ಬಸವ ಕೇಂದ್ರದ 1462ನೇ ಶಿವಾನುಭವ ಕಾರ್ಯಕ್ರಮದಲ್ಲಿ ಶಿವಶರಣ ಹಡಪದ ಅಪ್ಪಣರವರ ಜಯಂತಿಯನ್ನು ಆಚರಿಸಲಾಯಿತು.

ಮಲ್ಲಿಕಾರ್ಜುನ ಖಂಡಮ್ಮನವರ ಹಡಪದ ಅಪ್ಪಣ್ಣವರ ವಚನಗಳನ್ನು ಪ್ರಸ್ತುತಪಡಿಸಿ, ಭಾವಾರ್ಥವನ್ನು ತಿಳಿಸಿ, ಹಡಪದ ಅಪ್ಪಣ್ಣನವರು ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲೂಕಿನ ಮಸಬಿನಾಳದಲ್ಲಿ ಚೆನ್ನಬಸವೇಶ್ವರ ಅವರ ಗುರು, ಮಹಾಶಿವಶರಣೆ ಲಿಂಗಮ್ಮನವರು ಅವರ ಧರ್ಮಪತ್ನಿ. ದಂಪತಿಗಳಿಬ್ಬರೂ ಗುರು ಚನ್ನ



ಮಲ್ಲೇಶ್ವರರಿಂದ ಲಿಂಗದೀಕ್ಷೆಯನ್ನು ಪಡೆದುಕೊಂಡರೆಂದು ತಿಳಿದು ಬರುತ್ತದೆ. ಅಪ್ಪಣ್ಣನವರ ನಿಜನಾಮ ಜೀವಣನೆಂದು ಬಸವಣ್ಣನವರು ಅವರನ್ನು ಅಪ್ಪಿಕೊಂಡ ಕಾರಣ ಅಪ್ಪಣ್ಣರಾದರೆಂದು ಇತಿಹಾಸವಿದೆ ಎಂದು ಹಡಪದ ಅಪ್ಪಣ್ಣನವರ ಬಗ್ಗೆ ಪರಿಚಯಿಸಿದರು. ಕಾರ್ಯಕ್ರಮದಲ್ಲಿ ಹಡಪದ ಸಮಾಜದ ಹನಮಂತಪ್ಪ ಬಸಪ್ಪ ಹಡಪದ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದ ಸ್ವಾಗತ, ನಿರೂಪಣೆಯನ್ನು ಶಿವರಾಜ ಸೋ. ವಡ್ಡರ ನೆರವೇರಿಸಿದರು. ಶರಣ ಸಮರ್ಪಣೆಯನ್ನು ಆನಂದ ಶಿ. ಕುರುಬರ ಅರ್ಪಿಸಿದರು.

### ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಶಾಸಕ ಸಿ.ಸಿ. ಪಾಟೀಲ ಕರೆ

# ಪ್ರತಿಭಾವಂತ ವಿದ್ಯಾರ್ಥಿಗಳು ದೇಶದ ಪ್ರಗತಿಗಾಗಿ ಸೇವೆ ಮಾಡಿ




**■ವಿಜಯಸಾಕ್ಷಿ ಸುದ್ದಿ, ಗದಗ**

ಐಐಟಿ, ಐಐಎಮ್ ಮುಂತಾದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಅಧ್ಯಯನ ಮಾಡಿದ ಪ್ರತಿಭಾವಂತ ವಿದ್ಯಾರ್ಥಿಗಳು, ಬೇರೆ ದೇಶಕ್ಕೆ ಹೋಗಿ ಸೇವೆ ಸಲ್ಲಿಸುವ ಮನೋಭಾವನೆಯನ್ನು ತೊರೆದು, ನಮ್ಮ ದೇಶದ ಪ್ರಗತಿಗಾಗಿ ಜೀವನ ಮುಡಿಪಾಗಿಡಬೇಕೆಂದು ಶಾಸಕ ಸಿ ಸಿ ಪಾಟೀಲ ಕರೆ ನೀಡಿದರು.

ಅವರು ಭಾನುವಾರ ಸಂಕನೂರ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸ್ ಹಾಗೂ ಕರ್ನಾಟಕ ರಾಜ್ಯ ಪದವಿಪೂರ್ವ ಮಹಾವಿದ್ಯಾಲಯದ ನೌಕರರ ಸಂಘ ಇವುಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾದ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಶಿರಹಟ್ಟಿ ಶಾಸಕ ಡಾ. ಚಂದ್ರು ಲಮಾಣಿ ಮಾತನಾಡಿ, ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಹಂತದಿಂದಲೇ ಐಎಎಸ್. ಹಾಗೂ ಕೆಪಿಎಸ್‌ಸಿ ಪರೀಕ್ಷೆಗಳಿಗೆ ಪೂರ್ವಸಿದ್ಧತೆ ಮಾಡಿಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಮನವಿ ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ವಿ.ಪ ಸದಸ್ಯ ಎಸ್ ವಿ ಸಂಕನೂರ ಮಾತನಾಡಿ, ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವ ಶಕ್ತಿ ನಿಮ್ಮಲ್ಲಿಯೇ ಇದೆ. ಇದನ್ನು ಅರಿತುಕೊಂಡು ಸತತ ಪ್ರಯತ್ನ ಮತ್ತು ಪರಿಶ್ರಮದಿಂದ ಎತ್ತರ ಸ್ಥಾನಕ್ಕೆ ಏರಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಗದಗ ಜಿಲ್ಲಾ ಪ್ರಾಂಶುಪಾಲರ ಸಂಘದ ಅಧ್ಯಕ್ಷ ಎಮ್ ಸಿ ಕಟ್ಟಿಮನಿ, ಗದಗ-ಬೆಟಗೇರಿ ನಗರಸಭೆಯ ಅಧ್ಯಕ್ಷೆ ಉಷಾ ದಾಸರ ಉಪಸ್ಥಿತರಿದ್ದರು.

ಸಿಎ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿಯೇ ಉತ್ತೀರ್ಣರಾದ ಕಿರಣ ಮಾನೇದ, ಪದವಿಪೂರ್ವ ನೌಕರರ ಸಂಘದ ಗದಗ ಜಿಲ್ಲಾಧ್ಯಕ್ಷರಾಗಿ ನಿರಂತರ ಸೇವೆಗೈದ ಜಿ ಎಮ್ ಹಕಾರಿ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಪದವಿಪೂರ್ವ ಉಪನ್ಯಾಸಕರ ಸಂಘದ ಜಿಲ್ಲಾ ಘಟಕ ಅಧ್ಯಕ್ಷ ಎಸ್ ಎಸ್ ಸೋಮಣ್ಣವರ, ಮಾಧ್ಯಮಿಕ ಶಾಲಾ ನೌಕರರ ಸಂಘದ ಅಧ್ಯಕ್ಷ ಎಮ್ ಕೆ ಲಮಾಣಿ, ಕಾರ್ಯದರ್ಶಿ ಎ ಎಸ್ ಪಾಟೀಲ, ಪ್ರಾಚಾರ್ಯರ ಸಂಘದ ಕಾರ್ಯದರ್ಶಿ ವಾಯ್ ಸಿ ಪಾಟೀಲ, ಸಹ ಶಿಕ್ಷಕರ ಸಂಘ ಗದಗ ಶಹರ ಘಟಕಾಧ್ಯಕ್ಷ ಶರಣಪ್ಪ ನಾಗರಳ್ಳಿ ಹಾಗೂ ಕಾರ್ಯದರ್ಶಿ ಬಿ ಎಫ್ ಪೂಜಾರ ಉಪಸ್ಥಿತರಿದ್ದರು. ಅಶೋಕ ಅಂಗಡಿ ಸ್ವಾಗತಿಸಿದರು. ದತ್ತಪ್ರಸನ್ನ ಪಾಟೀಲ ನಿರೂಪಿಸಿದರು. ಎನ್ ವಿ ಜೋಶಿ ವಂದಿಸಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸೌಮ್ಯ ಸೊರಟೂರ, ಲಕ್ಷ್ಮಿ ಜಿಗಳೂರ, ರೋಹನ ಹುಬ್ಬಳ್ಳಿ, ಚೇತನ ಹತ್ತಿಕಾಳ, ಮುಬಾರಕ ಮುಲ್ಲಾ, ಪ್ರಿಯಾ ಬಿ ದೇಸಾಯಿ, ಅಂಜುಮ್ ನದಾಫ್, ರಾಜೇಶ್ವರಿ ಚನ್ನಪ್ಪಗೌಡ್ರ, ನಮ್ರತಾ ಜೋಗಿನ, ವಿಶ್ವನಾಥ ಹಿರೇಗೌಡರ ಇವರನ್ನು ಸನ್ಮಾನಿಸಲಾಯಿತು.

ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕಲಾ ವಿಭಾಗದಲ್ಲಿ ಸಾಧನೆಗೈದ ಅಂದಾನಮ್ಮ ಮೃತ್ಯುಂಜಯ ಬಳ್ಳಾರಿ, ಭಾಗ್ಯ ಬಸವರಾಜ ಗೌಡ್ರ, ಸೋಮಲಿಂಗ ಬಾಕಳೆ, ವೈಷ್ಣವಿ ರಾಥೋಡ, ವಾಣಿಜ್ಯ ವಿಭಾಗದಲ್ಲಿ ರೀತ್ ಜೈನ್, ಅಂಚಲ್ ಆರ್ ಬಾಪ್ನಾ, ಕೀರ್ತಿ ಕರ್ಲವಾಡ, ವಿಜ್ಞಾನ ವಿಭಾಗದಲ್ಲಿ ಸಾಧನೆ ಮಾಡಿದ ಅಮೃತಗೌಡ ಬಸನಗೌಡ ಬಾಲನಗೌಡ್ರ, ಅರ್ಪಿತಾ ತಿರಕನಗೌಡ್ರ, ಐಶ್ವರ್ಯ ಪಾಟೀಲ, ದಿವ್ಯಾ ಹಳೇಮನಿ ಇವರನ್ನು ಪುರಸ್ಕರಿಸಲಾಯಿತು.

# ದಿ. ಷಡಾಕ್ಷರಯ್ಯ ಕರಿಸಿದ್ಧಿಮಠವರ ಪುಣ್ಯಸ್ಮರಣೆ ಕಾರ್ಯಕ್ರಮ

**■ವಿಜಯಸಾಕ್ಷಿ ಸುದ್ದಿ, ಗದಗ**

ದಿ.ಷಡಾಕ್ಷರಯ್ಯ. ಕರಿಸಿದ್ಧಿಮಠವರ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ಶ್ರೀಮತಿ ನಿರ್ಮಲಾ ಷಡಾಕ್ಷರಯ್ಯ ಕರಿಸಿದ್ಧಿಮಠವರು ವಿಶ್ವ ಕಲ್ಯಾಣ ಗದಗ ಸಂಚಾಲಿತ ಭುವನೇಶ್ವರಿ ವಿಶೇಷ ಅಗತ್ಯವುಳ್ಳ ಮಕ್ಕಳ ಶಾಲೆಯಲ್ಲಿ ಆಚರಿಸಲಾಯಿತು.

ಕೆಆರ್‌ಎಸ್ ಪಾರ್ಟಿಯ ಗದಗ ಜಿಲ್ಲಾ ರೈತ ಘಟಕದ ಅಧ್ಯಕ್ಷ ನೀಲಪ್ಪ ಎಚ್ ಕಟಗಿ, ಗಣ್ಯ ಉದ್ಯಮಿ ಶಂಕರಗೌಡ ಪಾಟೀಲ ಮಾತನಾಡಿ, ಸಮಾಜದಲ್ಲಿ ಅವಕಾಶ ವಂಚಿತ ವಿಶೇಷ ಮಕ್ಕಳಿಗೆ ಸೂಕ್ತವಾದ ಅವಕಾಶಗಳನ್ನು ಕಲ್ಪಿಸಿ, ಅವರವರ ಸಾಮರ್ಥ್ಯಗೆ ತಕ್ಕಂತೆ ತರಬೇತಿ ನೀಡಿ, ಸಮಾಜದ ಮುಖ್ಯವಾಹಿನಿಗೆ ತರುತ್ತಿರುವ ಸಂಸ್ಥೆಯ ಸೇವಾ ಕಾರ್ಯ ಶ್ಲಾಘನೀಯವಾಗಿದೆ. ಈ ಸೇವಾ ಕಾರ್ಯಕ್ಕೆ ಎಲ್ಲರೂ ಸೇರಿ ಸಹಾಯ-ಸಹಕಾರ ಮಾಡೋಣವೆಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ಮಂಜುನಾಥ ಹದ್ದಣ್ಣವರವರ ವಹಿಸಿ ಪ್ರಾಸ್ತವಿಕವಾಗಿ ಮಾತನಾಡಿ, ಶ್ರೀಮತಿ ನಿರ್ಮಲಾ ಷಡಾಕ್ಷರಯ್ಯ ಕರಿಸಿದ್ಧಿಮಠವರು ನಿರಂತರವಾಗಿ ಸಹಾಯ ಮಾಡುತ್ತಾ ನಮ್ಮ ಸೇವಾ ಕಾರ್ಯಕ್ಕೆ ಬೆನ್ನೆಲುಬಾಗಿ ನಿಂತಿದ್ದಾರೆ. ದಿ. ಷಡಾಕ್ಷರಯ್ಯವರ ಪುಣ್ಯ ಸ್ಮರಣೆಯನ್ನು ಇಡೀ ಸಮಾಜಕ್ಕೆ ಮಾದರಿಯಾಗುವಂತೆ



ಹಮ್ಮಿಕೊಂಡಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಜಯಶ್ರೀ ಹಿರೇಮಠ, ಶಮ್‌ಶ್ಯಾದಬೇಗಮ್ ದಾವಲಸಾಬ ಮುಲ್ಲಾ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವ ವಿದ್ಯಾಲಯದ ಎಮ್‌ಎಸ್‌ಡಬ್ಲ್ಯೂ ಪ್ರಶಿಕ್ಷಣಾರ್ಥಿಗಳಾದ ರವಿಕುಮಾರ ಹಮ್ಮಗಿ, ವಿರೇಶ ಭಂಗಿ, ವಿಶೇಷ ಮಕ್ಕಳು, ಸಿಬ್ಬಂದಿ ಹಾಗೂ ಪಾಲಕರು ಉಪಸ್ಥಿತರಿದ್ದರು.


**ನೀವೂ ನಮ್ಮ ಜೊತೆ ಕೈಜೋಡಿಸಿ**

**'ವಿಜಯಸಾಕ್ಷಿ'**

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

# ಬಿಸಿಯೂಟ ಸಿಬ್ಬಂದಿಗಳನ್ನು ಡಿ ಗ್ರೂಪ್ ನೌಕರರಾಗಿ ಪರಿಗಣಿಸಿ

▶▶ ಮೊದಲನೇ ಪುಟದಿಂದ

ಅನಾರೋಗ್ಯ ಅಥವಾ ಅನಿವಾರ್ಯತೆ ಇದ್ದಾಗ ಕೆಲಸ ನಿರ್ವಹಿಸಲು ಅನುಕೂಲವಾಗುವಂತೆ ಪ್ರತಿ ಶಾಲೆಯಲ್ಲಿ 2 ಜನ ಅಡುಗೆಯವರು ಕೆಲಸ ನಿರ್ವಹಿಸಲು ಅನುಕೂಲ ಮಾಡಿಕೊಡಬೇಕು.

ಈಗಾಗಲೇ ಶಾಲೆಯಲ್ಲಿ ಅಡುಗೆ ಕೆಲಸದ ಜೊತೆ ಶಾಲಾ ಸ್ವಚ್ಛತೆ, ಕೈತೋಟ ನಿರ್ವಹಣೆ, ಶಾಲಾ ಸಮಯದ ಗಂಟೆ ಬಾರಿಸುವುದು, ಇನ್ನಿತರ ಕೆಲಸಗಳನ್ನೂ ನಿರ್ವಹಿಸುತ್ತಿದ್ದಾರೆ.

ಆದ್ದರಿಂದ ಈ ನೌಕರರನ್ನು ಡಿ ಗ್ರೂಪ್ ನೌಕರರಾಗಿ ಪರಿಗಣಿಸಬೇಕೆಂದು ಶಿಕ್ಷಣ ಸಚಿವ ಮಧು ಬಂಗಾರಪ್ಪನವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಪ್ರೇಮಾ ಪೂಜಾರ, ಅಶ್ವಿನಿ ಉಳ್ಳಾಗಡ್ಡಿ, ಪೀರು ರಾಠೋಡ ಸೇರಿದಂತೆ ಅಕ್ಷರ ದಾಸೋಹ ನೌಕರರ ಉಪಸ್ಥಿತರಿದ್ದರು.

# ಲೋಕ ಅದಾಲತ್‌ನಲ್ಲಿ ಒಂದಾದ ಪತಿ-ಪತ್ನಿ

▶▶ ಮೊದಲನೇ ಪುಟದಿಂದ

ಮರುಹೊಂದಾಣಿಕೆ ಮಾಡಿ ಪತಿ, ಪತ್ನಿಯರನ್ನು ಒಂದುಗೂಡಿಸಲಾಯಿತು. ನ್ಯಾಯಾಧೀಶರ ಸಮ್ಮುಖ, ಮಾರ್ಗದರ್ಶನದಲ್ಲಿ ಎರಡೂ ಜೋಡಿಗಳನ್ನು ಒಗ್ಗೂಡಿಸಿ ವಿಚ್ಛೇಧನ ಪ್ರಕರಣದಿಂದ ಹಿಂದೆ ಪಡೆಯುವಂತೆ ಮಾಡುವ ಮೂಲಕ ಆ ದಂಪತಿಗಳು ಮತ್ತೆ ಒಂದಾಗುವಂತೆ ಮಾಡಿದರು. ಈ ವೇಳೆ ಲಕ್ಷ್ಮೇಶ್ವರ ವಕೀಲರ ಸಂಘದ ಅಧ್ಯಕ್ಷ ಬಿ.ಎಸ್. ಬಾಳೇಶ್ವರಮಠ, ಹಾಗೂ ಎಂ.ಪಿ. ಯಲವಗಿ, ಶಕೀಲಾ ಮುಳಗುಂದ, ವ್ಹಿ.ಆರ್.ಪಾಟೀಲ, ಬಿ.ವ್ಹಿ.ನೇಕಾರ, ಎಸ್.ಎಸ್.ಶೆಟ್ಟರ, ಎಸ್.ಸಿ. ನರಸಮ್ಮನವರ, ಎನ್.ಐ. ಬೆಲ್ಲದ, ಬಿ.ಎನ್.ಸಂಶಿ, ವಿ.ಆರ್.ಪಾಟೀಲ, ಎನ್.ಎಂ.ರಿತ್ತಿಮಠ, ಉಮಾ ಬಳ್ಳಾರಿ, ವ್ಹಿ.ಎಸ್.ಪಶುಪತಿಹಾಳ, ಮುಂತಾದ ವಕೀಲರು ಉಪಸ್ಥಿತರಿದ್ದರು.

# ಶಕ್ತಿ ಯೋಜನೆಗೆ ಒಂದು ತಿಂಗಳು

▶▶ ಮೊದಲನೇ ಪುಟದಿಂದ

## ವಿಭಾಗವಾರು ಅಂಕಿ-ಅಂಶಗಳು

ಹು-ಧಾ ನಗರ ಸಾರಿಗೆ-54,23,700 ಪ್ರಯಾಣಿಕರು / 6,64,83,273 ರೂ. ಟಿಕೆಟ್ ಮೌಲ್ಯ, ಹುಬ್ಬಳ್ಳಿ ಗ್ರಾಮಾಂತರ-27,70,090 ಪ್ರಯಾಣಿಕರು / 10,01,89,702 ರೂ. ಟಿಕೆಟ್ ಮೌಲ್ಯ, ಧಾರವಾಡ-3,26,298 ಪ್ರಯಾಣಿಕರು / 8,93,61,503 ರೂ. ಟಿಕೆಟ್ ಮೌಲ್ಯ, ಬೆಳಗಾವಿ-61,15,163 ಪ್ರಯಾಣಿಕರು / 12,70,99,283 ರೂ. ಟಿಕೆಟ್ ಮೌಲ್ಯ, ಚಿಕ್ಕೋಡಿ-52,83,421 ಪ್ರಯಾಣಿಕರು / 13,52,65,560 ರೂ. ಟಿಕೆಟ್ ಮೌಲ್ಯ, ಬಾಗಲಕೋಟೆ-49,70,498 ಪ್ರಯಾಣಿಕರು / 16,07,82,999 ರೂ. ಟಿಕೆಟ್ ಮೌಲ್ಯ, ಗದಗ-42,45,811 ಪ್ರಯಾಣಿಕರು / 13,02,22,151 ರೂ. ಓಕೆಟ್ ಮೌಲ್ಯ, ಹಾವೇರಿ-44,97,458 ಪ್ರಯಾಣಿಕರು / 12,40,80,658 ರೂ. ಟಿಕೆಟ್ ಮೌಲ್ಯ, ಉತ್ತರ ಕನ್ನಡ-36,77,199 ಪ್ರಯಾಣಿಕರು / 10,16,80,838 ರೂ. ಟಿಕೆಟ್ ಮೌಲ್ಯ.

ಜಿಲ್ಲೆಗಳ 9 ಸಾರಿಗೆ ವಿಭಾಗಗಳ ಬಸ್ಸುಗಳಲ್ಲಿ ಜೂನ್ 11ರಿಂದ ಜುಲೈ 10 ರವರೆಗೆ ಒಟ್ಟು 4,02,52,638 ಮಹಿಳೆಯರು ಉಚಿತ ಪ್ರಯಾಣ ಮಾಡಿದ್ದಾರೆ. ಪ್ರಯಾಣದ ಟಿಕೆಟ್ ಮೌಲ್ಯ ರೂ. 103,51,65,967 ಆಗಿದೆ ಎಂದು ಅವರು ತಿಳಿಸಿದ್ದಾರೆ.

# ಕನಿಷ್ಠ! ವೇತನ ಜಾರಿಗೊಳಿಸಿ

▶▶ ಮೊದಲನೇ ಪುಟದಿಂದ

ನೀಡಬೇಕು. ದುರ್ಘಟನೆಗಳ ಸಂದರ್ಭದಲ್ಲಿ ಎಫ್‌ಐಆರ್ ಇಲ್ಲದೆ ಅನುದಾನ ಕೊಡಬೇಕು. ಯಾವುದೇ ಸೇವಾಭದ್ರತೆ ಇಲ್ಲದೆ 20 ವರ್ಷಗಳಿಂದ ಶಾಲೆಗಳಲ್ಲಿ ದುಡಿಯುವ ಮಹಿಳೆಯರ ಸಂಕಷ್ಟಕ್ಕೆ ಸ್ಪಂದಿಸಬೇಕು ಇತ್ಯಾದಿ ಪ್ರಮುಖ ಬೇಡಿಕೆಗಳ ಮನವಿ ಪತ್ರವನ್ನು ಅಕ್ಷರ ದಾಸೋಹ ಸಿಬ್ಬಂದಿಗಳು ಸಲ್ಲಿಸಿದರು.

ಈ ವೇಳೆ ಅನ್ನಪೂರ್ಣ ಮಡಿವಾಳರ, ಪಾರ್ವತಿ ಗಾಣಿಗೇರ, ಪ್ರೇಮಾ ಮಳಗಿ, ಚೇತನಾ ಸುರಳಿಯವರ, ಕಸ್ತೂರಿ ಮಾಮನಿ, ರಜಿಯಾ ನಧಾಫ್, ಶೈಲಾ ಪರಸಣ್ಣವರ, ಮಹಾದೇವಿ ಖರಾಟೆ, ಸುಮಾ ಹುಲ್ಲೂರ, ದೀಪಾ ಹುಲಿಕಟ್ಟಿ, ರೇಖಾ ಕಳ್ಳಿ, ಪ್ರೇಮಾ ಮಳಗಿ, ಶಂಕ್ರಮ್ಮ ಜೋಗೇರ, ಸಾವಿತ್ರಿ ಶರಸೂರಿ, ಸುಮಂಗಲಾ ನರೇಗಲ್, ಪವಿತ್ರಾ ಗಜಾಕೋಶ, ದೇವಕ್ಕ ಬಳಿಗಾರ, ಲಕ್ಷ್ಮೀ ಪಾಟೀಲ ಸೇರಿ ಹಲವರಿದ್ದರು. ತಾ ಪಂ ಇಓ ಕೃಷ್ಣಪ್ಪ ಧರ್ಮರ ಮನವಿ ಸ್ವೀಕರಿಸಿದರು.

## 1995-96ನೇ ಸಾಲಿನ ವಿದ್ಯಾರ್ಥಿಗಳ ಗುರುವಂದನ ಕಾರ್ಯಕ್ರಮದಲ್ಲಿ ವಿ.ಬಿ. ಸವಣೂರು

# ಗುರುವಿನಷ್ಟೇ ಉತ್ತಮ ಶಿಷ್ಯರು ಸಿಗುವುದು ಮುಖ್ಯ

■ ವಿಜಯಸಾಕ್ಷಿ ಸುದ್ದಿ, ಗದಗ

ದಶಕಗಳೆ ಕಳೆದರೂ ನನ್ನ ಸೇವೆಯನ್ನು ನೆನಪಿನಲ್ಲಿ ಇಟ್ಟುಕೊಂಡು ನನ್ನ ವಿದ್ಯಾರ್ಥಿಗಳು ನನ್ನನ್ನು ಸತ್ಕರಿಸಿದ್ದು ಸಂತಸ ತಂದಿದ್ದು, ಜೀವನದಲ್ಲಿ ಉತ್ತಮ ಗುರು ಮಾತ್ರವಲ್ಲ, ಉತ್ತಮ ಶಿಷ್ಯರು ಸಿಗುವುದು ಸಹ ಅಷ್ಟೇ ಮುಖ್ಯವಾಗುತ್ತದೆ ಎಂದು ಶಿಕ್ಷಕರಾದ ವ್ಹಿ.ಬಿ ಸವಣೂರು ನುಡಿದರು.

ಅವರು ಇತ್ತೀಚಿಗೆ ಗದಗ ತಾಲೂಕಿನ ನಾರಾಯಣಪುರ ಗ್ರಾಮದಲ್ಲಿ 1995-96ನೇ ಸಾಲಿನ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಗುರುವಂದನ ಹಾಗೂ ಸ್ನೇಹ ಸಮ್ಮೇಳನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಸರ್ಕಾರಿ ಶಾಲೆಗಳಲ್ಲಿ ಕಲಿತ ಗುರು-ಶಿಷ್ಯರ ನಡುವೆ ಅವಿನಾಭಾವ ಸಂಬಂಧ ಇರುತ್ತದೆ, ನನ್ನ ಶಿಷ್ಯರ ಈ ಕಾರ್ಯಕ್ರಮದಲ್ಲಿ ನಾನು ತೀವ್ರ ಭಾವುಕತೆಯನ್ನು ಅನುಭವಿಸಿದೆ. ಇಂಥ ಶ್ರೇಷ್ಠ ವಿದ್ಯಾರ್ಥಿಗಳಿಗೆ ಬೋಧಿಸಿದ್ದು ನನ್ನ ಪಾಲಿಗೆ ಹೆಮ್ಮೆಯ ವಿಷಯವಾಗಿದ್ದು, ನನ್ನ ಶಿಷ್ಯರ ಪ್ರೀತಿಯ ಋಣವನ್ನು ತೀರಿಸಲು ಸಾಧ್ಯವಿಲ್ಲ ಎಂದರು.



ಕಾರ್ಯಕ್ರಮದಲ್ಲಿ ಸನ್ಮಾನಗೊಂಡ ಇನ್ನೊರ್ವ ಶಿಕ್ಷಕರಾದ ಎಮ್.ಎನ್. ಬಡಿಗೇರ ಮಾತನಾಡಿ, ನಮ್ಮ ಕೈಯಿಂದ ಕಲಿತ ವಿದ್ಯಾರ್ಥಿಗಳು ಉನ್ನತ ಮಟ್ಟಕ್ಕೆ ತಲುಪಿದಾಗ ಪ್ರತಿ ಶಿಕ್ಷಕರಿಗೂ ಸಂತಸದ ಜೊತೆಗೆ ಸಾತ್ವಿಕವಾದ ಗರ್ವ ಬರುತ್ತದೆ ಇವತ್ತು ನನ್ನ ವಿದ್ಯಾರ್ಥಿಗಳು ಮಾಡಿದ ಈ ಕಾರ್ಯಕ್ರಮವನ್ನು ನೋಡಿ ನನ್ನ ಗರ್ವ ಇನ್ನಷ್ಟು ಹೆಚ್ಚಾಗಿದೆ. ವಿದ್ಯಾರ್ಥಿಗಳು ನಾವು ಕಲಿತ ಪಾಠದ ಜೊತೆಗೆ ಮೌಲ್ಯಗಳನ್ನು ಇಂದಿಗೂ ಕಾಪಾಡಿಕೊಂಡು ಬಂದಿರುವುದು ಬಹಳ ಹೆಮ್ಮೆಯ ವಿಚಾರ ಎಂದರು.

ತರಗತಿಯಲ್ಲಿ ಪಾಠ ಮಾಡುವುದರ ಜೊತೆಗೆ ಬದುಕಿನ ಪಾಠವನ್ನು ಹೇಳಿಕೊಡುವುದು ಸರಕಾರಿ ಶಾಲೆಗಳ ಹೆಮ್ಮೆ, ಹಾಗಾಗಿ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ಇಷ್ಟು ಉತ್ತಮ ರೀತಿಯಲ್ಲಿ ಬೆಳೆದಿರುವುದು ನಮಗೆ ಸಂತಸದ ವಿಷಯ. ವಿದ್ಯಾರ್ಥಿಗಳ ಬದುಕು ಇನ್ನಷ್ಟು ಉಜ್ವಲವಾಗಲಿ ಜೊತೆಗೆ ಈ ಶಾಲೆಯು ಎಲ್ಲ ರಂಗದಲ್ಲಿಯೂ ಪ್ರಗತಿ ಹೊಂದಲಿ ಎಂದು ಹಾರೈಸಿದರು.

ಕಾರ್ಯಕ್ರಮಕ್ಕೂ ಮೊದಲು ವಿದ್ಯಾರ್ಥಿಗಳು ಶಿಕ್ಷಕರನ್ನು ಗ್ರಾಮದಲ್ಲಿ ಅದ್ದೂರಿ ಮೆರವಣಿಗೆ ಮಾಡಿದರು.

ಜೊತೆಗೆ ಹಳೆ ವಿದ್ಯಾರ್ಥಿಗಳೆಲ್ಲರೂ ಒಂದೇ ರೀತಿಯ ಸಮವಸ್ತ್ರ ಧರಿಸುವ ಮೂಲಕ ಶಿಸ್ತಿನ ಸಿಪಾಯಿಗಳಂತಿದ್ದರು. ಕಾರ್ಯಕ್ರಮವನ್ನು ಶಿಕ್ಷಕರು ಕಪ್ಪುಹಲಗೆಯ ಮೇಲೆ ಬರೆಯುವ ಮೂಲಕ ವಿನೂತನವಾಗಿ ಉದ್ಘಾಟಿಸಿದರು. ಎಲ್ಲಾ ಹಳೆಯ ವಿದ್ಯಾರ್ಥಿಗಳಿಗೆ ಪಾಟಿಯನ್ನು ಸ್ಮರಣಿಕೆಯಾಗಿ ಕೊಡುವ ಮೂಲಕ ಕಾರ್ಯಕ್ರಮವನ್ನುಸ್ಮರಣೀಯಗೊಳಿಸಲಾಯಿತು. ಎಸ್‌ಡಿಎಮ್‌ಸಿ ಅಧ್ಯಕ್ಷರು, ಗ್ರಾಮ ಪಂಚಾಯಿತಿ ಸದಸ್ಯರು, ಊರಿನ ಗಣ್ಯರು ಕಾರ್ಯಕ್ರಮದಲ್ಲಿ ಹಾಜರಿದ್ದರು.

## ವಿಶ್ವ ಜನಸಂಖ್ಯೆ ದಿನಾಚರಣೆಯ ಕಾರ್ಯಕ್ರಮದಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಇಸರನಾಳ ಕರೆ

# ಕುಟುಂಬ ಯೋಜನೆ ಅಳವಡಿಸಿಕೊಳ್ಳಿ-ಚಿಕ್ಕ ಚೊಕ್ಕ ಸಂಸಾರ ಹೊಂದಿ

■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಜನಸಂಖ್ಯೆ ಹೆಚ್ಚಳದಿಂದ ಬಡತನ ಹೆಚ್ಚಳವಾಗುತ್ತದೆ ಸರಕಾರವು ವಿವಿಧ ಯೋಜನೆಗಳನ್ನು ಜಾರಿಗೆ ತಂದಿದೆ. ತಾಯಂದಿರು 2 ಮಕ್ಕಳು ಜನಿಸಿದ ನಂತರ ಕುಟುಂಬ ಯೋಜನೆಯನ್ನು ಅಳವಡಿಸಿಕೊಂಡರೆ ಚಿಕ್ಕ ಸಂಸಾರ ಚೊಕ್ಕ ಸಂಸಾರ ಹೊಂದಬಹುದು ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಎಮ್.ಎಮ್.ಇಸರನಾಳ ಹೇಳಿದರು.

ಅವರು, ಗದಗ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕು ಆಡಳಿತ, ತಾಲೂಕ ಪಂಚಾಯತ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಸರಕಾರಿ ಪದವಿ ಪೂರ್ವ ಕಾಲೇಜು ಹಾಗೂ ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ ಮುಂಡರಗಿ ಇವರ ಸಂಯುಕ್ತಾಶ್ರಯದಲ್ಲಿ ಮಂಗಳವಾರದಂದು ಮುಂಡರಗಿ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ವಿಶ್ವ ಜನಸಂಖ್ಯೆ ದಿನಾಚರಣೆ ಕುಟುಂಬ ಕಲ್ಯಾಣ ಯೋಜನೆಗಳ ಕುರಿತು ಸಮುದಾಯ ಜಾಗೃತಿಕರಣ ಪಾಕ್ಷಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.



ಜನಸಂಖ್ಯೆ ನಿಯಂತ್ರಿಸಿದರೆ ಜನಸಂಖ್ಯಾ ಸ್ಪೋಟದಿಂದಾಗುವ ದುಷ್ಪರಿಣಾಮವನ್ನು ತಡೆಯಬಹುದು. ಇದರ ಬಗ್ಗೆ ಯುವಜನರಿಗೆ ಜಾಗೃತಿಯನ್ನು ಮೂಡಿಸುವ ಅವಶ್ಯಕತೆಯಿದೆ ಎಂದು ಇಸರನಾಳ ಹೇಳಿದರು.

ತಾಲೂಕ ಆರೋಗ್ಯ ಶಿಕ್ಷಣಾಧಿಕಾರಿ ಶ್ರೀಮತಿ ಎಮ್.ಎಸ್ ಸಜ್ಜನರ ಪ್ರಾಸ್ತಾವಿಕವಾಗಿ ಮಾತನಾಡಿ, ಜುಲೈ 11 ರಂದು ವಿಶ್ವ ಜನಸಂಖ್ಯಾ ದಿನಾಚರಣೆಯನ್ನು ಆಚರಣೆ ಮಾಡಲಾಗುತ್ತದೆ. ಈ ವರ್ಷದ ಘೋಷವಾಕ್ಯ "ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಕುಟುಂಬ ಯೋಜನೆಯನ್ನು ಅಳವಡಿಸಿಕೊಂಡು ಸಂತೋಷ ಮತ್ತು ಸಮೃದ್ದಿಯ ಜೀವನವನ್ನು ಆಯ್ಕೆ ಮಾಡಿಕೊಳ್ಳುತ್ತೇವೆಂದು ಪ್ರತಿಜ್ಞೆ ಮಾಡೋಣ" ಎಂದು ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಗಂಡಿಗೆ 21 ವರ್ಷ, ಹೆಣ್ಣಿಗೆ 18 ವರ್ಷ ತುಂಬಿದ ನಂತರ ಮದುವೆ ಮಾಡಬೇಕು ಎಂದರು.

ತಾಲೂಕು ಆಡಳಿತ ವೈದ್ಯಾಧಿಕಾರಿ ಡಾ. ಲಕ್ಷ್ಮಣ ಪೂಜಾರ ಮಾತನಾಡಿ ಶಾಶ್ವತ ವಿಧಾನದಲ್ಲಿ ಮಹಿಳೆಯರಿಗಾಗಿ ಲ್ಯಾಪ್ರೋಸ್ಕೋಪಿ ಮತ್ತು ಟುಬ್ಯಕ್ಟೋಮಿ ಎಂಬ ಎರಡು ವಿಧಾನಗಳಿವೆ. ಪುರುಷರಿಗಾಗಿ ನೋ ಸ್ಕಾಲ್ ಪೆಲ್ ವ್ಯಾಸೆಕ್ಟಮಿ ಈ ವಿಧಾನಗಳನ್ನು ಅನುಸರಿಸುವುದರಿಂದ 2 ಮಕ್ಕಳ ನಂತರ ಶಾಶ್ವತವಾಗಿ ಶಸ್ತ್ರಚಿಕಿತ್ಸೆಯನ್ನು ಮಾಡಿಕೊಂಡು ಚಿಕ್ಕ ಕುಟುಂಬ ಚೊಕ್ಕ ಕುಟುಂಬ ಹೊಂದಬಹುದು. ಇದರಿಂದ ತಾಯಿ ಮಕ್ಕಳ ಮರಣ ಪ್ರಮಾಣವನ್ನು ತಡೆಗಟ್ಟಬಹುದು ಮತ್ತು ಜನಸಂಖ್ಯೆ ಸ್ಫೋಟದಿಂದಾಗುವ ಸಮಸ್ಯಗಳನ್ನು ತಡೆಗಟ್ಟಬಹುದು. ಇದರ ಬಗ್ಗೆ ಯುವಜನರಿಗೆ ಜಾಗೃತಿ ಮೂಡಿಸುವುದು ಅವಶ್ಯವಾಗಿದೆ ಎಂದು ಹೇಳಿದರು.

ಮುಂಡರಗಿ ಜೆ.ಎ.ಬಿ.ಎಡ್ ಕಾಲೇಜ್ ಪ್ರಾಚಾರ್ಯರಾದ ಸಿ.ಎಸ್. ಅರಸನಾಳ ಅವರು ಉಪನ್ಯಾಸ ನೀಡಿ, ವಿಶ್ವದ ಜನಸಂಖ್ಯೆಯು 804 ಕೋಟಿ ಇದೆ ಭಾರತದ ಜನಸಂಖ್ಯೆಯು 142 ಕೋಟಿ ತಲುಪಿದೆ. ಚೀನಾ ದೇಶವನ್ನು ಹಿಂದಿಕ್ಕಿ ಭಾರತ ದೇಶವು ವಿಶ್ವದಲ್ಲಿಯೇ ಜನಸಂಖ್ಯೆಯಲ್ಲಿ ಪ್ರಥಮ ಸ್ಥಾನವನ್ನು ಹೊಂದಿದೆ ಎಂದು ಹೇಳಿ ವಿಶ್ವದ ಒಟ್ಟು ಜಸಂಖ್ಯೆಯಲ್ಲಿ ಶೇ 17.7 ರಷ್ಟು ಭಾರತೀಯರೆ ಇದ್ದಾರೆ. ದೇಶದ ಸಿಮಿತ ಸಂಪನ್ಮೂಲಗಳ ಹಿನ್ನಲೆಯಲ್ಲಿ ಜನಸಂಖ್ಯೆ ಸ್ಫೋಟವು ಒಂದು ಸಮಸ್ಯೆಯಾಗಿದೆ ಹಾಗೂ ಜನಸಂಖ್ಯೆ ಹೆಚ್ಚಳಕ್ಕೆ ಜೀವಿತಾವಧಿ ಹೆಚ್ಚಳ, ಮರಣ ಪ್ರಮಾಣ ಕಡಿಮೆ 1.8 ರಷ್ಟಿದೆ ಹಾಗೂ ವೈದ್ಯಕೀಯಲ್ಲಾದ ಬದಲಾವಣೆಯಿಂದ ಮರಣ ಪ್ರಮಾಣ ಕಡಿಮೆಯಾಗಿದೆ. ಇದರಿಂದ ಭಾರತ ಇದೇ ರೀತಿ ಜನಸಂಖ್ಯೆಯಲ್ಲಿ ಮುಂದುವರೆಸಿದ್ದರೆ ಅಭಿವೃದ್ದಿಗೆ ಸಮಸ್ಯೆಯಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸರಕಾರಿ ಪದವಿ ಪೂರ್ವ ಕಾಲೇಜ್ ಪ್ರಾಚಾರ್ಯರಾದ ಶ್ರೀಮತಿ ಜಯಲಕ್ಷ್ಮಿ ಬ ಕುರಟ್ಟಿ ಮಾತನಾಡಿ, ಇಂದಿನ ಯುವಕರು ನಾಳಿನ ಪ್ರಜೆಗಳು.

ಈಗಿನ ಯುವ ಜನಾಂಗಕ್ಕೆ ಜನಸಂಖ್ಯೆ ಹೆಚ್ಚಳದ ಬಗ್ಗೆ ಅರಿವು ಮೂಡಿಸುವುದು ಅತಿ ಅವಶ್ಯವಾಗಿದೆ ಎಂದರು.

ಕಾವ್ಯ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಶ್ರೀಮತಿ ಆರ್. ಆರ್. ಇನಾಮದಾರ ಕಾರ್ಯಕ್ರಮ ನಿರೂಪಿಸಿದರು. ಸರಕಾರಿ ಪದವಿ ಪೂರ್ವ ಕಾಲೇಜಿನ ಅಧಿಕಾರಿ ಆನಂದರೆಡ್ಡಿ ಮೇಗೇರಿ ಸ್ವಾಗತಿಸಿದರು. ಕೆ.ವಿ. ಬಡಿಗೇರ ವಂದಿಸಿದರು.

# ಲೋಕಸಭಾ ಚುನಾವಣೆಗೆ ಪಕ್ಷ ಸಂಘಟಿಸಿ



■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ತಾಲೂಕಿನ ಡಂಬಳ ಹೋಬಳಿಯ ಮುರಡಿ ಗ್ರಾಮದಲ್ಲಿ ಮಂಗಳವಾರ ರೋಣ ಮಾಜಿ ಶಾಸಕ ಕಳಕಪ್ಪ ಬಂಡಿ ನೇತೃತ್ವದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಆಡಳಿತದ ಅವಧಿಯಲ್ಲಿನ ಸಾಧನೆ ಕುರಿತು ಕರಪತ್ರಗಳನ್ನು ಕಾರ್ಯಕರ್ತರೊಂದಿಗೆ ವಿತರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಶಾಸಕ ಕಳಕಪ್ಪ ಬಂಡಿ, ದೇಶದಲ್ಲಿ ಪ್ರಧಾನ ಮಂತ್ರಿ ಅನೇಕ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ, ಬರುವ ಲೋಕಸಭೆ ಚುನಾವಣೆಯಲ್ಲಿ ಕಾರ್ಯಕರ್ತರು ಪಕ್ಷ ಸಂಘಟನೆ ಮಾಡಬೇಕು. ಮತ್ತೊಮ್ಮೆ ಕೇಂದ್ರದಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬರಲಿದೆ ಎಂದರು.

ಡಂಬಳ ಮಂಡಳ ಅಧ್ಯಕ್ಷ ರವಿ ಕರಿಗಾರ ಬಸವರಾಜ ಸಂಗನಾಳ, ನಾಗರಾಜ ಕಾಟ್ರಹಳ್ಳಿ, ಅಂದಪ್ಪ ಹಾರೋಗೇರಿ, ಮಲ್ಲನಗೌಡ್ರ ಪಾಟೀಲ, ಪ್ರಕಾಶ ಕೋತಂಬ್ರಿ, ಜಗದೀಶ ತಳವಾರ, ಈಶಪ್ಪ ರಂಗಪ್ಪನವರ, ಪ್ರಮೋದ ಪಾಟೀಲ, ಈರಯ್ಯ ವಿರುಪಾಪೂರಮಠ, ಮಲ್ಲಪ್ಪ ಅಂಗಡಿ, ನಾಗರಾಜ ನವಲಿ ಸೇರಿದಂತೆ ಅನೇಕ ಕಾರ್ಯಕರ್ತರು ಪಾಲ್ಗೊಂಡಿದ್ದರು.

# ಮಹಿಳೆಯರು ಸ್ವಾವಲಂಬಿಗಳಾಗಿ: ರಜನಿ ಪಾಟೀಲ



■ ವಿಜಯಸಾಕ್ಷಿ ಸುದ್ದಿ, ಗದಗ

ಮಹಿಳೆಯರ ಸ್ವಾವಲಂಬಿ ಜೀವನವು ಆರ್ಥಿಕವಾಗಿ ಅವರು ಸಬಲರಾಗಲು ಪ್ರೇರಣೆ ನೀಡುತ್ತದೆ. ಎಲ್ಲ ಮಹಿಳೆಯರು ತಮ್ಮ ಅಭಿರುಚಿಗೆ ತಕ್ಕಂತೆ ಬೇರೆ ಬೇರೆ ಕೆಲಸಗಳನ್ನು ಮಾಡಿ ಸ್ವಾವಲಂಬಿಗಳಾಗಿರಬೇಕು ಎಂದು ಇನ್ನರ್‌ವೀಲ್ ಕ್ಲಬ್ ಅಧ್ಯಕ್ಷೆ ರಜನಿ ಪಾಟೀಲ ಅಭಿಪ್ರಾಯಪಟ್ಟರು.

ಇನ್ನರ್‌ವೀಲ್ ಕ್ಲಬ್ ಸುವರ್ಣ ಮಹೋತ್ಸವದ ಅಧ್ಯಕ್ಷರಾಗಿ ಆಯ್ಕೆಯಾದ ಅವರನ್ನು ಪಂಚಮಸಾಲಿ ಮಹಿಳಾ ಸಮಾಜದ ವತಿಯಿಂದ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಅಧ್ಯಕ್ಷೆ ಜಯಶ್ರೀ ಉಗಲಾಟದ ಮಾತನಾಡಿ, ಪಂಚಮಸಾಲಿ ಸಮಾಜದ ಎಲ್ಲ ಮಹಿಳೆಯರೂ ಒಗ್ಗಟ್ಟಾಗಿ ಸಮಾಜವನ್ನು ಬೆಳೆಸೋಣ. ನಮ್ಮ ಪಂಚಮಸಾಲಿ ಸಮಾಜದ ಹಿರಿಯರಾದ ರಜನಿ ಪಾಟೀಲ್ ಅವರನ್ನು ಸನ್ಮಾನಿಸುವುದು ಸಂತೋಷದ ವಿಚಾರ ಎಂದರು.

ಶಾಂತಾ ತುಪ್ಪದ ಪ್ರಾರ್ಥಿಸಿದರು. ಸುಮಾ ಪಾಟೀಲ್ ಪರಿಚಯಿಸಿದರು. ಜಯಶ್ರೀ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ರೇಣುಕಾ ಅಮಾತ್ಯ ವಂದಿಸಿದರು. ಜ್ಯೋತಿ ದಾನಪ್ಪಗೌಡರ, ಮಾಧುರಿ ಮಳೆಕೊಪ್ಪ, ಶಶಿಕಲಾ ಮಾಲಿಪಾಟೀಲ, ನಾಗರತ್ನ ಮಾರನಬಸರಿ, ಈರಮ್ಮ ಮಾಡಲಗೇರಿ, ಸುಷ್ಮಾ ಸಂಕಣ್ಣವರ, ಗೀತಾ ಉಗಲಾಟದ, ವಿಜಯಶ್ರೀ ಇಳಕಲ, ಮಾಲತಿ ಓಲಪ್ಪನವರ, ಕುಸುಮ ಹಡಗಲಿ, ಸುನಂದ ಪಾಟೀಲ್ ಮುಂತಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ತೋಂಟದಾರ್ಯಮಠದ ಭಕ್ತರಿಗೆ, ಮಹಿಳೆಯರಿಗೆ ಆಗುವ ಮುಜುಗರ ತಪ್ಪಿಸಿ

# ಸನ್ನದು ರದ್ದುಗೊಳಿಸಲು ಜಯ ಕರ್ನಾಟಕ ಸಂಘಟನೆಯಿಂದ ಮನವಿ



■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಹೃದಯ ಭಾಗದಲ್ಲಿರುವ ತೋಂಟದಾರ್ಯ ಮಠದ ಮಾಲ್ಕಿ ಹಕ್ಕುಳ್ಳ ಆಸ್ತಿಯಲ್ಲಿ

ಅಬ7 ಸುಪ್ರಿಯಾ ಬಾರ್ ಮತ್ತು ರೆಸ್ಟೋರೆಂಟ್ ಹಾಗೂ ಲಾಡ್ಜ್ ಮದ್ಯದ ಅಂಗಡಿಯ ಸನ್ನದನ್ನು ರದ್ದುಗೊಳಿಸುವಂತೆ ಜಯ ಕರ್ನಾಟಕ ಸಂಘಟನೆಯ ವತಿಯಿಂದ ಗದಗ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಮನವಿ ಸಲ್ಲಿಸಿ ಮಾತನಾಡಿದ ಭಾಷಾಸಾಬ ಮಲ್ಲಸಮುದ್ರ, ತೆ-ೂಂಟದಾರ್ಯ ಮಠದ ಮಾಲ್ಕಿ ಹಕ್ಕುಳ್ಳ ಆಸ್ತಿಯಲ್ಲಿ ಅಬ7 ಪರವಾನಗಿ ಹೊಂದಿರುವ ಸುಪ್ರಿಯಾ ಬಾರ್ ಮತ್ತು ರೆಸ್ಟೋರೆಂಟ್ ಹಾಗೂ ಲಾಡ್ಜ್ ಹಾಗೂ ಪ್ರಶಾಂತ ಬಾರ್ ಮತ್ತು ರೆಸ್ಟೋರೆಂಟ್ ಸದರಿ ಸನ್ನದುಗಳನ್ನು ಬೇರೆ ಕಡೆ ಸ್ಥಳಾಂತರಿಸಲು ಈ ಹಿಂದಿನ ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಭೇಟಿ ಆದೇಶ ಮಾಡಿದ್ದರು. 2019ರಲ್ಲಿ 2ನೇ ಬಾರಿಗೆ ಮತ್ತೆ ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಬೇರೆ ಕಡೆ ಸ್ಥಳಾಂತರಿಸುವಂತೆ ಆದೇಶಿಸಿದ್ದರು.

ಕಾರಣ ಈ ಹಿಂದಿನ ಮಾನ್ಯ ಜಿಲ್ಲಾಧಿಕಾರಿಗಳು ಮಾಡಿ ಆದೇಶಿಸಿರುವ ಆದೇಶವನ್ನು ಎತ್ತಿ ಹಿಡಿದು ಸನ್ನದುದಾರರಿಗೆ ನ್ಯಾಯಾಲಯ ಅಥವಾ ಮೇಲ್ಮನವಿಗೆ ಹೋಗಲು ಅವಕಾಶ ನೀಡದೆ ಸನ್ನದು ರದ್ದು ಪಡಿಸಬೇಕು. ಹಾಗೂ ಈ ಹಿಂದೆ ಮಾನ್ಯ ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆ ವೇಳೆ ಸದರಿ ಪ್ರದೇಶದ ಸಾರ್ವಜನಿಕರಿಗೆ ಶಾಂತಿ ಮತ್ತು ಸುವ್ಯವಸ್ಥೆಗೆ ಧಕ್ಕೆ, ಆಕ್ಷೇಪಣೆ, ಮಹಿಳೆಯರು ಹಾಗೂ ಮಕ್ಕಳಿಗೆ ಕಿರುಕುಳ ಮತ್ತು ಸಾರ್ವಜನಿಕರಿಗೆ ಮತ್ತು ಸ್ಥಳೀಯರಿಗೆ ಜೀವ ರಕ್ಷಣೆಗೆ ಮತ್ತು ವೈಯಕ್ತಿಕ ಸ್ವಾತಂತ್ರ್ಯಕ್ಕೆ ಧ-ಕ್ಕೆ ಉಂಟಾಗುವುದು ಸೇರಿದಂತೆ 5 ಪ್ರಮುಖ ಕಾರಣಗಳನ್ನು ನೀಡಲಾಗಿತ್ತು.

ಅಲ್ಲದೆ ದಾಖಲೆ ಸಮೇತ ಅಬಕಾರಿ ಇಲಾಖೆಗೆ ದೂರು ನೀಡಲಾಗಿದ್ದರೂ ಅಬಕಾರಿ ಇಲಾಖೆಯು ಕ್ರಮ ಕೈಗೊಂಡಿರುವುದಿಲ್ಲ. ಇದರಿಂದಾಗಿ ಶ್ರೀ ತೋಂಟದಾರ್ಯಮಠದಲ್ಲಿ ದಿನನಿತ್ಯ ಸಾಂಸ್ಕೃತಿಕ ಕಾರ್ಯಕ್ರಮದ ಜೊತೆಗೆ ಶಿವಾನುಭವದಂತಹ ಕಾರ್ಯಕ್ರಮವನ್ನು ಶಾಂತಿಭಂಗ ಮಾಡುವ ನಿಟ್ಟಿನಲ್ಲಿ ಈ ಮದ್ಯದ ಅಂಗಡಿಗಳು ಕಾರ್ಯನಿರ್ವಹಿಸುತ್ತಿರುವುದು ನಮ್ಮ ಸಂಘಟನೆಗೆ ಹಾಗೂ ಸಾರ್ವಜನಿಕರಿಗೆ, ಸದ್ಭಕ್ತರಿಗೆ ನೋವು ತಂದಿದೆ.

ಕಾರಣ ಶ್ರೀಮಠದ ಭಕ್ತರಿಗೆ ಹಾಗೂ ಸಾರ್ವಜನಿಕರಿಗೆ ಹಾಗೂ ಮಹಿಳೆಯರ ಹಾಗೂ ಹೆಣ್ಣುಮಕ್ಕಳ ಮತ್ತು ಈ ಭಾಗದ ಹಿರಿಯ ನಾಗರಿಕರ ತೊಂದರೆಗಳನ್ನು ಗಮನದಲ್ಲಿಟ್ಟು ಈ ಹಿಂದೆ ಮಾನ್ಯ ಜಿಲ್ಲಾಧಿಕಾರಿಯ ಆದೇಶವನ್ನು ಎತ್ತಿ ಹಿಡಿದು ಮತ್ತೆ ಸನ್ನದನ್ನು ಸ್ಥಳಾಂತರಿಸಲು ಆದೇಶ ಮಾಡದೆ ಈ ಬಾರಿ ಸನ್ನದು ರದ್ದುಪಡಿಸುವಂತೆ ಒತ್ತಾಯಿಸಿದರು.

ಉಪ ಜಿಲ್ಲಾಧಿಕಾರಿಗಳು ಹಾಗೂ ಅಬಕಾರಿ ಜಿಲ್ಲಾಧಿಕಾರಿಗಳು ಮನವಿ ಸ್ವೀಕರಿಸಿ 15 ದಿನಗಳಲ್ಲಿ ಸೂಕ್ತ ಕ್ರಮ ಕೈಗೊಂಡು ಆದೇಶಿಸುತ್ತೇನೆ ಎಂದು ಹೇಳಿದರು.

ಈ ಪ್ರತಿಭಟನೆಯಲ್ಲಿ ಜಯ ಕರ್ನಾಟಕ ಸಂಘಟನೆ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಕಾಂತ ಚವ್ಹಾಣ, ಶಹರ ಅಧ್ಯಕ್ಷರಾದ ನಾಗರಾಜ ಕ್ಷತ್ರಿಯ ಗ್ರಾಮ ಘಟಕದ ಪದಾಧಿಕಾರಿಗಳು, ತಾಲೂಕ ಘಟಕದ ಪದಾಧಿಕಾರಿಗಳು, ಮುನ್ನಾ ಶೇಖ ಪ್ರತಿಭಟನೆಯಲ್ಲಿದ್ದರು.

# ಮೂಲಭೂತ ಸೌಲಭ್ಯಗಳಿಗೆ ಆಗ್ರಹಿಸಿ ಮನವಿ

▶▶ ಮೊದಲನೇ ಪುಟದಿಂದ

ನಿತ್ಯ ಸಂಚರಿಸುವಾಗ ಜೀವ ಭಯ ಕಾಡುವಂತಾಗಿದೆ. ಆದ್ದರಿಂದ ರಸ್ತೆಗಳನ್ನು ತಾತ್ಕಾಲಿಕ ಸುಧಾರಣೆ, ಕಚ್ಚಾ ಚರಂಡಿ ನಿರ್ಮಾಣ, ಸ್ವಚ್ಛತೆ ಕಾಪಾಡುವ ಕೆಲಸವನ್ನು ತಕ್ಷಣಕ್ಕೆ ಮಾಡಬೇಕು. 2-3 ಬಾರಿ ಪುರಸಭೆಗೆ ಇಲ್ಲಿನ ನಿವಾಸಿಗಳು ಮನವಿ ಸಲ್ಲಿಸಿದ್ದರೂ ಯಾವುದೇ ಸ್ಪಂದನೆ ದೊರಕಿಲ್ಲ, ಇದೀಗ ಶೀಘ್ರ ಕ್ರಮಕ್ಕೆ ಪುರಸಭೆ ಮುಂದಾಗದಿದ್ದರೆ, ಪುರಸಭೆ ಎದುರಿನಲ್ಲಿ ಧರಣಿ ಕುಳಿತು ಪ್ರತಿಭಟಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಪುರಸಭೆ ವ್ಯವಸ್ಥಾಪಕಿ ಮಂಜುಳಾ ಹೂಗಾರ ಮನವಿ ಸ್ವೀಕರಿಸಿದರು. ಈ ವೇಳೆ ನಿವಾಸಿಗಳಾದ ಎಸ್.ಆರ್.ಕೋರಿ, ಬಿ.ಎನ್.ಪಡಗೇರಿ, ಮೈಲಾರಪ್ಪ ಪಡಿಗೇರಿ, ನೀಲಪ್ಪ ಪಡಗೇರಿ, ಬಿ.ಎಚ್. ಬೂದಿಹಾಳ, ಬಸವರಾಜ ಗೊಜಗೊಜಿ, ಗಂಗವ್ವ, ಪಿ.ಸಿ.ಪಾಟೀಲ, ವಿದ್ಯಾ ಬನ್ನಿ, ಪಾರ್ವತಿ ಬನ್ನಿ, ಎಸ್.ಎನ್.ಕೋರಿ, ಪಾರವ್ವ ಬನ್ನಿ, ಜಯಶ್ರೀ ಕೋಷ್ಠಿ, ನೀಲವ್ವ, ವನವ್ವ, ಶಿವಲೀಲಾ ಬನ್ನಿ, ನಿರ್ಮಲಾ ಗೊಜಗೊಜಿ, ರೇಣುಕಾ ಖಂಡ್ರೆನವರ, ನಿರ್ಮಲಾ, ಯಲ್ಲವ್ವ ಹಲವರಿದ್ದರು.

# ಇಂದು ರಾಹುಲ್ ಗಾಂಧಿ ಬೆಂಬಲಿಸಿ ಕಾಂಗ್ರೆಸ್‌ನಿಂದ ಸತ್ಯಾಗ್ರಹ

▶▶ ಮೊದಲನೇ ಪುಟದಿಂದ

ಮಾಡುತ್ತಿದ್ದಾರೆ. ಆದ್ದರಿಂದ ರಾಹುಲ್ ಗಾಂಧಿ ಅವರಿಗೆ ಬೆಂಬಲ ಸೂಚಿಸುವುದಕ್ಕಾಗಿ ಒಂದು ದಿನದ ಮೌನ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಅವರು ಪಾಲ್ಗೊಳ್ಳುತ್ತಿದ್ದು, ಕಾಂಗ್ರೆಸ್ ಪಕ್ಷದ ಮಾಜಿ ಹಾಗೂ ಹಾಲಿ ಶಾಸಕರು, ಪಕ್ಷದ ಜಿಲ್ಲಾ ಪದಾಧಿಕಾರಿಗಳು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ ಮಾಜಿ ಸದಸ್ಯರು, ಗ್ರಾಮ ಪಂಚಾಯತ, ಎಪಿಎಂಸಿ ಪಕ್ಷದ ಅಧ್ಯಕ್ಷರು ಹಾಗೂ ಸದಸ್ಯರು ಹಾಗೂ ನಗರಸಭೆ, ಪಟ್ಟಣ ಪಂಚಾಯಿತಿ, ಪುರಸಭೆ ಅಧ್ಯಕ್ಷರು ಹಾಗೂ ಸದಸ್ಯರು, ಮಹಿಳಾ ಕಾಂಗ್ರೆಸ್, ಯುವ ಕಾಂಗ್ರೆಸ್ ಸೇರಿದಂತೆ ಪಕ್ಷದ ಎಲ್ಲಾ ವಿಭಾಗದ ಘಟಕಗಳ ಅಧ್ಯಕ್ಷರು ಹಾಗೂ ಸದಸ್ಯರು, ಪಕ್ಷದ ಅಭಿಮಾನಿಗಳು ಪಾಲ್ಗೊಳ್ಳಬೇಕು ಎಂದು ಗದಗ-ಬೆಟಗೇರಿ ಶಹರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಬಿ. ಅಸೂಟಿ, ಮುಳಗುಂದ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಸವರಾಜ ಸುಂಕಾಪುರ, ಗದಗ ಜಿಲ್ಲಾ ಕಾಂಗ್ರೆಸ್ ಸಮಿತಿ ಮಹಾ ಪ್ರಧಾನ ಕಾರ್ಯದರ್ಶಿ ವಿ.ಬಿ. ಸೋಮನಕಟ್ಟಿಮಠ ಹಾಗೂ ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಶೋಕ ಮಂದಾಲಿ ವಿನಂತಿಸಿದ್ದಾರೆ.

# ಇಂದು ಮಾರನಬಸರಿಯಲ್ಲಿ ಅಯ್ಯಾಚಾರ, ಸಿದ್ಧಶ್ರೀ ಆಲ್ಬಂ ಸಾಂಗ್ ಚಿತ್ರೀಕರಣ



**■ ವಿಜಯಸಾಕ್ಷಿ ಸುದ್ದಿ, ಬಾಗಲಕೋಟೆ**

ಗದಗ ಜಿಲ್ಲೆಯ ಗಜೇಂದ್ರಗಡ ತಾಲೂಕಿನ ಮಾರನಬಸರಿ ಗ್ರಾಮದಲ್ಲಿ ಸಿದ್ಧನಕೊಳ್ಳದ ಸಿದ್ಧಪ್ಪಜ್ಜನ ಮಠದ ಧರ್ಮಾಧಿಕಾರಿಗಳಾದ ಡಾ. ಶಿವಕುಮಾರ್ ಮಹಾಸ್ವಾಮಿಗಳವರ ಸುಪುತ್ರರಾದ ರಾಜಶೇಖರಯ್ಯ ಮತ್ತು ಹರ್ಷ ಇವರ ಅಯ್ಯಾಚಾರ ಕಾರ್ಯಕ್ರಮ ಹಾಗೂ ಭಕ್ತಿಗೀತೆಯ ಆಲ್ಬಂ ಸಾಂಗ್ ಚಿತ್ರೀಕರಣ ಜು. 12 ರಂದು ನೆರವೇರಲಿದೆ ಎಂದು ಡಾ.ಶಿವಕುಮಾರಸ್ವಾಮಿಗಳು ತಿಳಿಸಿದರು.

ಜಿಲ್ಲೆಯ ಹುನಗುಂದ ತಾಲೂಕಿನ ಸಿದ್ದನಕೊಳ್ಳದಲ್ಲಿ ಜಾತ್ರಾಮಹೋತ್ಸವದ ವಿಡಿಯೋ ಆಲ್ಬಂಗಳನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಸಿದ್ದನಕೊಳ್ಳಮಠದ ಶ್ರೀಗಳ ಜನ್ಮಸ್ಥಳವಾದ ಗದಗ ಜಿಲ್ಲೆಯ ಗಜೇಂದ್ರಗಡ ತಾಲೂಕಿನ ಮಾರನಬಸರಿ ಗ್ರಾಮವು ಸಿದ್ದಪ್ಪಜ್ಜ ಶ್ರೀಗಳು ನಡೆದಾಡಿದ ಪುಣ್ಯ ಸ್ಥಳವಾಗಿದ್ದು, ಜು.12ರಂದು ನಡೆಯುವ ಕಾರ್ಯಕ್ರಮದ ಸಾನಿಧ್ಯವನ್ನು ನಿಡಗುಂದಿಕೊಪ್ಪದ ಪ.ಪೂ. ಶ್ರೀ ಅಭಿನವ ಚನ್ನಬಸವ ಮಹಾಸ್ವಾಮಿಗಳು ವಹಿಸುವುರು. ನೇತೃತ್ವವನ್ನು ಗುಳೆದಗುಡ್ಡದ ಮುರುಡಿಮಠದ ಪೂಜ್ಯಶ್ರೀ ಅಭಿನವ ಕಾಡಸಿದ್ದೇಶ್ವರ ಮಹಾಸ್ವಾಮಿಗಳು ವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ವಿ.ಎಸ್.ಅರಳಲಿಮಠ ತಳಕಲ್ ಧಾರವಾಡ, ಉದ್ಘಾಟನೆ ರೋಣ ಶಾಸಕರಾದ ಜಿ.ಎಸ್.ಪಾಟೀಲ್ ಹಾಗೂ ದಂಪತಿಗಳು ನೆರವೇರಿಸುವರು. ಹುನಗುಂದದ ಶಾಸಕರಾದ ವಿಜಯಾನಂದ ಎಸ್ ಕಾಶಪ್ಪನವರ ಕಾರ್ಯಕ್ರಮಕ್ಕೆ ಚಾಲನೆ ನೀಡುವರು. ಸಿ ಎಸ್ ನಾಡಗೌಡ, ಎನ್.ಎಚ್. ಕೋನರೆಡ್ಡಿ, ಭೀಮಸೇನ್ ಚಿಮ್ಮನಕಟ್ಟಿ, ದೊಡ್ಡನಗೌಡ ಪಾಟೀಲ್ ಇವರು ಜ್ಯೋತಿ ಬೆಳಗಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ರಾಷ್ಟ್ರೀಯ ಕಿಸಾನ್ ಸಮಿತಿ ನಿರ್ದೇಶಕರು ಹಾಗೂ ಕಾರ್ಯದರ್ಶಿಗಳಾದ ಡಾ.ಆರ್ ಎಸ್ ರಾಜು, ಡಾ.ಬಾಲಕೃಷ್ಣ ರೆಡ್ಡಿ, ನರೇಂದ್ರ ರೆಡ್ಡಿ, ಸುರೇಶ್ ಹಳೆಪೇಟೆ, ಮಲ್ಲು ವಿರಾಪುರ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮಕ್ಕೆ ತೆಲುಗು ಚಿತ್ರನಟ ರಾಜೇಶ್ ಕುಮಾರ್ ಆಗಮಿಸಲಿದ್ದಾರೆ. ಕಾರ್ಯಕ್ರಮದ ಅಂಗವಾಗಿ ಪ್ರಮೋದ್ ಡ್ಯಾನ್ಸ್ ಅಕಾಡೆಮಿ ಉಗಾರ್ ಸಾಂಗ್ಲಿ ಇವರಿಂದ ನೃತ್ಯ, ಕಲಾವಿದ ಮೆಲೋಡಿಸ್ ಐಹೊಳೆ ಇವರಿಂದ ರಸಮಂಜರಿ, ಚಿತ್ರನಟಿ ಕೃತಿಕಾ ದಯಾನಂದ್ ಬೆಂಗಳೂರು ಇವರಿಂದ ಭರತನಾಟ್ಯ ಜರುಗಲಿದೆ. ದಿ.12 ರಿಂದ ದಿ.14ರವರೆಗೆ ಭಕ್ತಿಗೀತೆಯ ಆಲ್ಬಂಸಾಂಗ್ ಚಿತ್ರಿಕರಣ ನಡೆಯಲಿದ್ದು, ಸಕಲ ಸದ್ಭಕ್ತರು ಆಗಮಿಸಬೇಕೆಂದು ಸಿದ್ದನಕೊಳ್ಳಮಠದ ಧರ್ಮಾಧಿಕಾರಿಗಳಾದ ಡಾ.ಶಿವಕುಮಾರ್ ಮಹಾಸ್ವಾಮಿಗಳು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಚಲನಚಿತ್ರ ನಟ, ಕಲಾನಿರ್ದೇಶಕ ವೀರೇಶ್ ಪುರವಂತರ, ಚಲನಚಿತ್ರ ಛಾಯಾಗ್ರಾಹಕ ಶಿವಶರಣ ಸುಗ್ನಳ್ಳಿ , ಚಲನಚಿತ್ರ ಪಿಆರ್‌ಓ ಡಾ.ಪ್ರಭು ಗಂಜಿಹಾಳ, ಕಲಾವಿದರಾದ ಸಂಗನಗೌಡ್ರ ಕುರುಡಗಿ ಮೊದಲಾದವರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ಉತ್ತಮ ಸಂಸ್ಕಾರ ನೀಡಲು ಸಲಹೆ *ಗಜೇಂದ್ರಗಡ ಅನ್ನದಾನೇಶ್ವರ ಪಿಯು ಕಾಲೇಜಿನ ಕಾರ್ಯಕ್ರಮ

# ಮಕ್ಕಳಿಗೆ ಗುಣಾತ್ಮಕ ಶಿಕ್ಷಣಕ್ಕೆ ಒತ್ತು ನೀಡಿ



**■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ**

ಕಾಲೇಜು ವಿದ್ಯಾರ್ಥಿಗಳಲ್ಲಿ ಬುದ್ಧಿ ಶಕ್ತಿಗೆ ಕೊರತೆಯಿಲ್ಲ. ಆದರೆ, ಸಂಸ್ಕಾರದ ಹಾಗೂ ಗುಣಾತ್ಮಕ ಶಿಕ್ಷಣದ ಕೊರತೆ ಎದ್ದು ಕಾಣುತ್ತಿದೆ. ಹೀಗಾಗಿ ಮಕ್ಕಳಿಗೆ ಕಲಿಕೆಯ ಹಂತದಲ್ಲೇ ಉತ್ತಮ ಸಂಸ್ಕಾರ ನೀಡಬೇಕು ಎಂದು ಹಾಲಕೆರೆ ಅನ್ನದಾನೇಶ್ವರ ಸಂಸ್ಥಾನ ಮಠದ ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳು ಹೇಳಿದರು.

ಗಜೇಂದ್ರಗಡ ಪಟ್ಟಣದ ಪುರ್ತಗೇರಿ ಕ್ರಾಸ್ ಬಳಿ ಇರುವ ಶ್ರೀ ಅನ್ನದಾನೇಶ್ವರ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಪ್ರಸಕ್ತ ಸಾಲಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ಹಾಗೂ ವಿವಿಧ ಸಾಂಘಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭದ ಸಾನಿಧಯ ವಹಿಸಿ ಆಶೀರ್ವಚನ ನೀಡಿದರು.

ಮನುಷ್ಯ ಶೈಕ್ಷಣಿಕವಾಗಿ ಎಷ್ಟೇ ಎತ್ತರಕ್ಕೆ ಬೆಳೆದರೂ ಅವನಲ್ಲಿ ಸಂಸ್ಕಾರವಿಲ್ಲದಿದ್ದರೆ ಆ ವ್ಯಕ್ತಿ ಸಮಾಜದ ಅತ್ಯಂತ ಕಟ್ಟಕಡೆಯ ವ್ಯಕ್ತಿಯಾಗಿರುತ್ತಾನೆ. ಅದಕ್ಕಾಗಿ ಅಕ್ಷರದ ಜೊತೆಗೆ ಮಾನವೀಯ ಮೌಲ್ಯಗಳನ್ನು ಒಳಗೊಂಡ ವಿದ್ಯಾರ್ಥಿಯು ಸಮಾಜಕ್ಕೆ ಬೇಕಾಗಿದ್ದಾನೆ ಎಂದರು. ನಮ್ಮ ಮಠದ ಅಂಗ ಸಂಸ್ಥೆಗಳಲ್ಲಿ ಕಲಿಯುವ ಮಕ್ಕಳು ಉತ್ತಮ ಫಲಿತಾಂಶವನ್ನು ದಾಖಲಿಸುವ ಮೂಲಕ ಮಠಕ್ಕೆ ಸಾಧನೆಯ ಕಾಣಿಕೆಯನ್ನು ನೀಡಬೇಕು ಎಂದರು. ಬದುಕಿನ ಸಾವಿರಾರು ಕನಸುಗಳಿಗೆ ಬೆಳಕು ಸಿಗುತ್ತದೆ ಎಂದು ಹಾಲಕೆರೆ ಮಠದ ಕಾಲೇಜುಗಳಿಗೆ ಪಾಲಕರು ತಮ್ಮ ಮಕ್ಕಳನ್ನು ಕಳುಹಿಸುತ್ತಾರೆ. ಆದ್ದರಿಂದ ವಿದ್ಯಾರ್ಥಿಗಳು ಇಲ್ಲಿನ ಉಪನ್ಯಾಸಕರ ಮಾರ್ಗದರ್ಶನ ಪಡೆದು ತಮ್ಮ ಜೀವನದ ಗುರಿಯನ್ನು ಸಾಧಿಸಲು ಮುಂದಾಗಬೇಕು ಎಂದರು.

ವಿಶೇಷ ಉಪನ್ಯಾಸ ನೀಡಿದ ಆಕಾಶವಾಣಿ ಕಲಾವಿದರಾದ ಚಂದ್ರಶೇಖರ ಎಂ. ವಡಿಗೇರಿ, ಮಕ್ಕಳ ಮನಸ್ಸು ಬಿಳಿ ಹಾಳೆ ಇದ್ದಹಾಗೆ ಅದರಲ್ಲಿ ಉಪನ್ಯಾಸಕರು ಏನು ಕಲಿಸುತ್ತಾರೋ ಅದೆ ಮೂಡುತ್ತದೆ, ಕಲಿಸುವ ಮೊದಲು ಯೋಚನೆ ಮಾಡಿ, ಉತ್ತಮ ತಯಾರಿ ನಡೆಸಿ ಬೋಧನೆ ಮಾಡಿರಿ ಹಾಗೂ ಮಕ್ಕಳಿಗೆ ಪಾಠದ ಜೊತೆಗೆ ಒಳ್ಳೆ ಸಂಸ್ಕಾರ ನೀಡಿ ಉತ್ತಮ ಪ್ರಜೆಗಳನ್ನಾಗಿ ನಿರ್ಮಾಣ ಮಾಡಿರಿ ಎಂದರು. ಪ್ರತಿ ವಿದ್ಯಾರ್ಥಿಯ ಭವಿಷ್ಯ ಗುರುವಿನ ಕೈಯಲ್ಲಿ ಇರುತ್ತದೆ ಹಾಗಾಗಿ ಶೈಕ್ಷಣಿಕ ಗುರಿ ಸಾಧಿಸಲು ಆಧುನಿಕ ಕಾಲಕ್ಕೆ ತಕ್ಕಂತೆ ಅಪೇಕ್ಷಿತ ಬದಲಾವಣೆ ಮಾಡಿಕೊಂಡು ವಿವಿಧ ಕಾರ್ಯ ತಂತ್ರಗಳನ್ನು ಅಳವಡಿಸಿಕೊಂಡು ಪಾಠ ಮಾಡಲು ಮುಂದಾಗಬೇಕು ಎಂದರು. ಮಿಮಿಕ್ರಿಯೇ ಹಾಗೂ ಹಾಡುಗಳನ್ನು ಹಾಡುವ ಮೂಲಕ ಮಕ್ಕಳಿಗೆ ಉಪನ್ಯಾಸ ನೀಡಿದರು.

ಈ ವೇಳೆ ಕಳೆದ ಸಾಲಿನ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ದೂರದರ್ಶನ ಕಲಾವಿದ ರಾಮಕೃಷ್ಣ ಪೂಜಾರ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಪಿಯು ಕಾಲೇಜಿನ ಚೇರಮನ್ನ ವೀರಯ್ಯ ವಿ. ವಸ್ತ್ರದ ಕಾರ್ಯಕ್ರಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿಯ ಆಡಳಿತಾಧಿಕಾರಿ ಎನ್. ಆರ್. ಗೌಡರ, ಪ್ರಧಾನ ಕಾರ್ಯದರ್ಶಿ ರವೀಂದ್ರನಾಥ ದೊಡ್ಡಮೇಟಿ, ಶೈಕ್ಷಣಿಕ ಮೇಲ್ವಿಚಾರಕ ಶಿವಾನಂದ ಮಠದ, ಆಡಳಿತ ಮಂಡಳಿ ಸದಸ್ಯರಾದ ಮುದಕಪ್ಪ ತೊಂಡಿಹಾಳ, ಪಿ. ಎನ್. ಚವಡಿ, ಎಸ್. ಸಿ. ಚಕ್ಕಡಿಮಠ, ಶರಣಪ್ಪ ಕೆ. ರೇವಡಿ, ಪಿಯು ಪ್ರಾಚಾರ್ಯ ವಸಂತರಾವ್ ಗಾರಗಿ, ಐಟಿಐ ಪ್ರಾಚಾರ್ಯ ಎ. ಪಿ. ಗಾಣಗೇರ, ಪದವಿ ಪ್ರಾಚಾರ್ಯ ಬಸಯ್ಯ ಹಿರೇಮಠ, ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಮಂಜುನಾಥ ಕಾಡದ ಇದ್ದರು.

ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕಿ ಲತಾ ಮಲ್ಲಿಕಾರ್ಜುನ ಅಭಿಮತ

# ಪತ್ರಿಕೆ, ಪತ್ರಕರ್ತರನ್ನು ಗೌರವಿಸಿ



**■ ವಿಜಯಸಾಕ್ಷಿ ಸುದ್ದಿ, ಮುಂಡರಗಿ**

ನಾವು ಇಂದು ಡಿಜಿಟಲ್ ಯುಗದಲ್ಲಿ ಮುನ್ನಡೆಯುತ್ತಿದ್ದರೂ, ಇನ್ನೂ ಶೇ.80ರಷ್ಟು ಜನರು ದಿನ ಪತ್ರಿಕೆಗಳನ್ನು ಓದಿಯೇ ತಮ್ಮ ಜ್ಞಾನ ಸಂಪಾದಿಸಿಕೊಳ್ಳುತ್ತಿದ್ದಾರೆ. ಕೆಲವರಿಗಂತೂ ಪತ್ರಿಕೆಗಳನ್ನು ಓದದಿದ್ದರೆ ಆ ದಿನದಲ್ಲಿ ಏನನ್ನೋ ಕಳೆದುಕೊಂಡಂತೆ ಆಗಿರುತ್ತದೆ. ದಿನಪತ್ರಿಕೆಗಳು ನಮಗೆ ಅನಿವಾರ್ಯವಾಗಿವೆ ಎಂದು ಹರಪನಹಳ್ಳಿಯ ಶಾಸಕಿ ಲತಾ ಮಲ್ಲಿಕಾರ್ಜುನ ಹೇಳಿದರು.

ಪಟ್ಟಣದ ತೋಂಟದಾರ್ಯ ಮಠದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಒಬ್ಬ ರಾಜಕಾರಣಿ ಮಾಡಿದ ಕೆಲಸ ಕಾರ್ಯಗಳು ಹಾಗೂ ಅವರು ಮಾಡಬೇಕಾದ ಕೆಲಸ ಕಾರ್ಯಗಳು ಇವೆರಡನ್ನೂ ಸಹ ಪತ್ರಿಕೆಗಳು ಮತ್ತು ಮಾಧ್ಯಮಗಳು ನಮಗೆ ತಿಳಿಸುವ ಕಾರ್ಯವನ್ನು ಮಾಡುತ್ತವೆ. ಅದಕ್ಕಾಗಿ ನಾವು ಪತ್ರಿಕೆಯನ್ನು ಹಾಗೂ ಪತ್ರಕರ್ತರನ್ನು ಸದಾ ಗೌರವದಿಂದ ಕಾಣಬೇಕು ಎಂದರು.

ಈ ಸಂದರ್ಭದಲ್ಲಿ ಮುಂಡರಗಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಎಲ್ಲ ಪತ್ರಕರ್ತರನ್ನು ಹಾಗೂ ತಾಲೂಕಿನ ಸೋಷಿಯಲ್ ಮೀಡಿಯಾ ವರದಿಗಾರರನ್ನು ಶ್ರೀಮಠದಿಂದ ನಿಜಗುಣಪ್ರಭು ತೋಂಟದಾರ್ಯ ಶ್ರೀ ಸನ್ಮಾನಿಸಿದರು.

ಸಾನ್ನಿಧ್ಯ ವಹಿಸಿದ್ದ ನಿಜಗುಣಪ್ರಭು ತೋಂಟದಾರ್ಯ ಸ್ವಾಮೀಜಿ ಮಾತನಾಡಿ, ಪತ್ರಿಕೆಗಳು ಇನ್ನೂ ಗುಣಾತ್ಮಕವಾಗಿ ಬೆಳೆಯಬೇಕು. ಪತ್ರಿಕಾ ವರದಿಗಾರರ ಮೇಲೆ ಬಹಳಷ್ಟು ಜವಾಬ್ದಾರಿ ಇದೆ. ಇದ್ದ ವಿಷಯವನ್ನು ಇದ್ದ ಹಾಗೆ ಬರೆಯುವವನೇ ನಿಜವಾದ ಪತ್ರಕರ್ತ ಎಂದರು.

ಪತ್ರಕರ್ತ ಪ್ರೊ. ಸಿ ಎಸ್ ಅರಸನಾಳ ಮಾತನಾಡಿದರು.

ಅಪಘಾತದಲ್ಲಿ ಗಾಯಗೊಂಡಿರುವ ಪತ್ರಕರ್ತ ದಿಲೀಪಕುಮಾರ ಜೋಶಿ ಅವರ ಕುಟುಂಬಕ್ಕೆ ಶ್ರೀಗಳು 10 ಸಾವಿರ ರೂ.ಗಳ ಧನಸಹಾಯವನ್ನು ನೀಡಿದರು. ಶಾಸಕಿ ಲತಾ ಮಲ್ಲಿಕಾರ್ಜುನರನ್ನು ಶ್ರೀಮಠದಿಂದ ಸನ್ಮಾನಿಸಲಾಯಿತು.

ಗೋಣಿರುದ್ರ ಸ್ವಾಮೀಜಿ, ಪ್ರಕಾಶಗೌಡ ಪಾಟೀಲ, ಮಂಜುನಾಥಗೌಡ ಪಾಟೀಲ, ಪವನ ಚೋಪ್ರಾ, ದೇವು ಹಡಪದ, ವೀರೇಂದ್ರ ಅಂಗಡಿ, ಪಾಲಾಕ್ಷಿ ಗಣದಿನ್ನಿ, ಎಚ್.ವಿರುಪಾಕ್ಷಗೌಡ, ಶಿವಕುಮಾರ ಬೆಟಗೇರಿ, ಓಂಪ್ರಕಾಶ ಲಿಂಗಶೆಟ್ಟರ, ನಾಗಯ್ಯ ಹಿರೇಮಠ, ಶಂಕ್ರಣ್ಣ ಅಂಗಡಿ, ಸದಾಶಿವಯ್ಯ ಕಬೂರಮಠ, ಸದಾಶಿವಯ್ಯ ಕಬೂರಮಠ, ಪತ್ರಕರ್ತರಾದ ಹು.ಬಾ. ವಡ್ಡಟ್ಟಿ, ಶರಣು ಸೊಲಗಿ, ಸಿ.ಕೆ. ಗಣಪ್ಪನವರ, ಕಾಶೀನಾಥ ಬಿಳಿಮಗ್ಗದ, ಸಂತೋಷಕುಮಾರ ಮುರುಡಿ, ಮಲ್ಲಿಕಾರ್ಜುನಗೌಡ ಪಾಟೀಲ, ಮಂಜುನಾಥ ಜಾಗಟಗೇರಿ ಉಪಸ್ಥಿತರಿದ್ದರು. ಕೊಟ್ರೇಶ ಅಂಗಡಿ ನಿರೂಪಿಸಿದರು.

# ಶರಣರ ಸ್ಮರಣೆಯಿಂದ ಜೀವನ ಸಾರ್ಥಕ



**■ ವಿಜಯಸಾಕ್ಷಿ ಸುದ್ದಿ, ಮುಂಡರಗಿ**

12ನೇ ಶತಮಾನದ ಬಸವಾದಿ ಶರಣರನ್ನು ನಾವೆಲ್ಲ ಇಂದಿಗೂ ಆರಾಧಿಸುತ್ತೇವೆ. ಆಧ್ಯಾತ್ಮ, ಶಿವಾನುಭವ, ಪ್ರವಚನವು ಆತ್ಮ, ಮನಸ್ಸುಗಳನ್ನು ಶುದ್ಧ ಮಾಡುತ್ತದೆ. ಪ್ರತಿಯೊಬ್ಬರೂ ಇಷ್ಟಲಿಂಗಧಾರಿಗಳಾಗಬೇಕು, ಭಸ್ಮಧಾರಿಗಳಾಗಬೇಕು, ರುದ್ರಾಕ್ಷಿ ಧರಿಸಬೇಕು. ಶರಣರು ಯಾವುದೇ ಜಾತಿಗೆ ಸೀಮಿತವಾಗಿರದೇ ಇಡೀ ಮನುಕುಲಕ್ಕೆ ಸೇರಿದವರು. ಇಂತವರನ್ನು ಸ್ಮರಣೆ ಮಾಡಿಕೊಂಡಾಗ ಮಾತ್ರ ಈ ಜನ್ಮ ಸ್ವಾರ್ಥಕವಾಗುತ್ತದೆ ಎಂದು ಧಾರವಾಡ ಮುರುಘಾಮಠದ ಡಾ.ಮಲ್ಲಿಕಾರ್ಜುನ ಸ್ವಾಮೀಜಿ ಹೇಳಿದರು. ಪಟ್ಟಣದ ಜಗದ್ಗುರು ತೋಂಟದಾರ್ಯ ಶಾಖಾಮಠದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ನಿಜಸುಖಿ ಹಡಪದ ಅಪ್ಪಣ್ಣ ಹಾಗೂ ಶರಣೆ ಲಿಂಗಮ್ಮ ಅವರ ಜಯಂತಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಶ್ರೀ ನಿಜಗುಣಪ್ರಭು ತೋಂಟ-ದಾರ್ಯ ಸ್ವಾಮೀಜಿ ಮಾತನಾಡಿ, ಹಡಪದ ಅಪ್ಪಣ್ಣ ಅವರ ವಚನಗಳು ಅದ್ಭುತ. ಶರಣೆ ಲಿಂಗಮ್ಮ ಶಿವಯೋಗ ಸಾಧನೆ ಮಾಡಿದ ಶರಣೆ. ಹಡಪದ ಸಮಾಜದವರು ಲಿಂಗ ಕಟ್ಟಿಕೊಂಡು ಸಾಧನೆ ಮಾಡಿ, ಅವರ ತತ್ತ್ವ ಉಳಿಸಬೇಕು. ಅಪ್ಪಣ್ಣನವರ ಆದರ್ಶಗಳನ್ನು ಇಂದಿನ ಯುವಕರು ಮೈಗೂಡಿಸಕೊಳ್ಳಬೇಕು ಎಂದರು. ಶ್ರೀ ಗೋಣಿರುದ್ರ ದೇವರು ಮಾತನಾಡಿದರು. ತಾಲೂಕು ಹಡಪದ ಸಮಾಜದ ಅಧ್ಯಕ್ಷ ಈರಣ್ಣ ಹಡಪದ, ಪ್ರವಚನ ಸಮಿತಿ ಅಧ್ಯಕ್ಷ ಪವನ ಚೋಪ್ರಾ, ಓಂಪ್ರಕಾಶ ಲಿಂಗಶೆಟ್ಟರ, ದೇವು ಹಡಪದ, ಶಿವು ಬೆಟಗೇರಿ, ವಿಶ್ವನಾಥ ಉಳ್ಳಾಗಡ್ಡಿ, ವೀರೇಂದ್ರ ಅಂಗಡಿ, ಶಿವಯೋಗಿ ನಾವಿ, ಹನುಮಂತ ಹಡಪದ, ಲಕ್ಷ್ಮಿಕಾಂತ ಭಾವಿಮನಿ, ಮಂಜು ಹಡಪದ, ಅಶೋಕ ಹಡಪದ, ಶಿವಾನಂದ ಹಡಪದ, ಶಿವಪ್ಪ ಹೆಸರೂರು ಮುಂತಾದವರು ಉಪಸ್ಥಿತರಿದ್ದರು. ಪಾಲಾಕ್ಷಿ ಗಣದಿನ್ನಿ ಸ್ವಾಗತಿಸಿದರು. ಕೊಟ್ರೇಶ ಅಂಗಡಿ ಕಾರ್ಯಕ್ರಮ ನಿರೂಪಿಸಿದರು.

# ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಸ್ಲಂ ಬೋರ್ಡ್ ಅಧಿಕಾರಿಗಳಿಗೆ ಮನವಿ

**■ ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ನಗರದ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಕುಟುಂಬಗಳ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸ್ಲಂ ಜನಾಂದೋಲನ-ಕರ್ನಾಟಕ ಮತ್ತು ಗದಗ ಜಿಲ್ಲಾ ಸ್ಲಂ ಸಮಿತಿಯ ಪದಾಧಿಕಾರಿಗಳು ಗದಗ ಉಪ-ವಿಭಾಗೀಯ ಸ್ಲಂ ಬೋರ್ಡ್ ಅಧಿಕಾರಿಗಳಿಗೆ ಮನವಿ ನೀಡಿ ಆಗ್ರಹಿಸಿದರು.

ಸಮಿತಿಯ ಜಿಲ್ಲಾಧ್ಯಕ್ಷ ಇಮ್ತಿಯಾಜ ಆರ್ ಮಾನ್ವಿ ಮಾತನಾಡಿ, ಸ್ಲಂ ಬೋರ್ಡ್ ಅಧಿಕಾರಿಗಳು ಕೊಳಚೆ ಪ್ರದೇಶಗಳ ಅಭಿವೃದ್ಧಿ ಮತ್ತು ವಸತಿ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ಅಧಿಕಾರಿಗಳು ಮತ್ತು ಗುತ್ತಿಗೆದಾರರು ಕಾನೂನು ಉಲ್ಲಂಘಿಸಿ ರಾಜ ಕಾಲುವೆ ಮತ್ತು ಗಟಾರ ಪಕ್ಕದಲ್ಲಿ ಆವಾಸ್ ಯೋಜನೆಯ ಮನೆಗಳನ್ನು ನಿರ್ಮಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸ್ಲಂ ಬೋರ್ಡ್‌ನ ಸಹಾಯಕ ಕಾರ್ಯಪಾಲಕ ಅಭಿಯಂತರ ಪ್ರವೀಣರವರು ಮನವಿ ಸ್ವೀಕರಿಸಿ, ಸ್ಲಂ ಸಮಿತಿಯಿಂದ ನೀಡಿರುವ ಎಲ್ಲಾ ಬೇಡಿಕೆಗಳಿಗೆ ಪ್ರಾಮಾಣಿಕವಾಗಿ ಸ್ಪಂದಿಸಲಾಗುವುದುಎಂದರು.

ಗದಗ ಜಿಲ್ಲಾ ಸ್ಲಂ ಸಮಿತಿಯ ಪದಾಧಿಕಾರಿಗಳಾದ ಅಶೋಕ ಕುಸಬಿ, ಮೆಹರುನಿಸಾ ಢಾಲಾಯತ, ಮಂಜುನಾಥ ಶ್ರೀಗಿರಿ, ಇಬ್ರಾಹಿಂ ಮುಲ್ಲಾ, ಭರತ ನವಲಗುಂದ, ದಾವಲಬಿ ಕೌತಾಳ, ಶಿವಾನಂದ ಶಿಗ್ಲಿ, ಮೆಹರುನಿಸಾ ಡಂಬಳ, ಶಂಕ್ರಪ್ಪ ರೋಣ, ವಿಶಾಲಕ್ಷಿ ಹಿರೇಗೌಡ್ರ, ರಾಜು ಭಜಂತ್ರಿ, ದಾವಲಸಾಬ ನದಾಫ, ಶಿವಾಜಿ ಮಂಟೂರ, ವಂದನಾ ಶ್ಯಾವಿ, ದುರ್ಗಪ್ಪ ಮಣ್ಣಿವಡ್ಡರ, ದಾವಲ ಯಾದಗೇರಿ, ಮಲೇಶಪ್ಪ ಕಲಾಲ, ಮಕ್ತುಸಾಬ ಮುಲ್ಲಾನವರ, ಶಂಕ್ರಪ್ಪ ಹದ್ಲಿ, ಸಾಕ್ರುಬಾಯಿ ಗೋಸಾವಿ, ಸಲೀಮ ಕದಡಿ, ಶಮಶಾದಬೇಗಂ ನರಗುಂದ, ದಾದು ಗೋಸಾವಿ, ನಜಮುನಿಸಾ ಮುರಗೋಡ, ರಾಧಾ ಬೋಡಗಲ್ಲ, ಕಾಶೀಮ ಬೈರಕದಾರ, ಶಿವಪ್ಪ ನರೇಗಲ್ಲ, ಕಮಲವ್ವ ಲಕ್ಕುಂಡಿ, ಶಿವಮ್ಮ ಅಗಸಿಮನಿ, ಶರಣಪ್ಪ ಮೂಲಿಮನಿ ಮುಂತಾದವರಿದ್ದರು.



# 'ವಿಶ್ವ ಪೇಪರ್ ಬ್ಯಾಗ್ ಡೇ' ಪ್ರಯುಕ್ತ ಕಾರ್ಯಕ್ರಮ



**■ ವಿಜಯಸಾಕ್ಷಿ ಸುದ್ದಿ, ಗದಗ**

ಇಲ್ಲಿನ ನಜೀರ್ ನಗರದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ `world paper bag day' ಪ್ರಯುಕ್ತ ಮಾನವ ಧರ್ಮ ವಿಜಯೀಭವ ತಂಡದಿಂದ 'ನಮ್ಮ ನಡೆ ಪ್ಲಾಸ್ಟಿಕ್ ಮುಕ್ತತೆಯ ಕಡೆ' ವಿಷಯದ ಕುರಿತು ಪ್ರಬಂಧ ಹಾಗೂ ರಸಪ್ರಶ್ನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಪ್ಲಾಸ್ಟಿಕ್‌ನಿಂದ ಆಗುತ್ತಿರುವ ಅನಾನುಕೂಲಗಳ ಬಗ್ಗೆ, ಅದರ ಮರು ಬಳಕೆಯ ಬಗ್ಗೆ ವಿಸ್ತಾರವಾಗಿ ಅರಿವು ಮೂಡಿಸಿ, ಪ್ರಕೃತಿಯ ಉಳಿವಿಗಾಗಿ ಮುಂದಿನ ಪೀಳಿಗೆ ಕೈಗೊಳ್ಳಬೇಕಾದ ಕಾರ್ಯಗಳನ್ನು ತಿಳಿಸಿ, ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಕಾಗದವನ್ನು ಬಳಸಲು ಉತ್ತೇಜಿಸಲಾಯಿತು. ಪ್ರಬಂಧ ಹಾಗೂ ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ 'ಕರುಣಾಳು ಬಾ ಬೆಳಕೆ' ಹೊತ್ತಿಗೆಯನ್ನು ಬಹುಮಾನವಾಗಿ ನೀಡಿ ಪ್ರೋತ್ಸಾಹಿಸಲಾಯಿತು.

ಪ್ರಾಂಶುಪಾಲ ವೀರೇಶ್, ಸಂಗೀತ ಶಿಕ್ಷಕ ಪರುಶು ನಾಯ್ಕ್, ತಂಡದ ಸದಸ್ಯರಾದ ಶ್ರವಣ್, ಶಶಿಕಿರಣ್, ಅರುಣ್, ಮಂಜುನಾಥ್, ರಾಕೇಶ್, ಹರೀಶ್, ಪ್ರಜ್ವಲ್, ಆಜಾದ್, ನಟರಾಜ, ಶಿವು, ಸಿದ್ದು ಮುಂತಾದವರು ಉಪಸ್ಥಿತರಿದ್ದರು.

# ಬಿಸಿಯೂಟ ಸಿಬ್ಬಂದಿಗಳಿಂದ ಪ್ರತಿಭಟನೆ



**■ ವಿಜಯಸಾಕ್ಷಿ ಸುದ್ದಿ, ರೋಣ**

ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸಿಐಟಿಯು ನೇತೃತ್ವದಲ್ಲಿ ಬಿಸಿಯೂಟ ಸಿಬ್ಬಂದಿಗಳು ತಹಸೀಲ್ದಾರ ಕಚೇರಿ ಎದುರು ಮಂಗಳವಾರ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಪೀರು ರಾಠೋಡ ಮಾತನಾಡಿ, 2023ನೇ ಸಾಲಿನ ಬಜೆಟ್‌ನಲ್ಲಿ ಘೋಷಣೆ ಮಾಡಿದ 1000 ರೂ.ಗಳ ಹೆಚ್ಚುವರಿ ವೇತನವನ್ನು ಶೀಘ್ರವೇ ಬಿಡುಗಡೆಗೊಳಿಸಬೇಕು. ನಿವೃತ್ತ ಸಿಬ್ಬಂದಿಗಳಿಗೆ 1 ಲಕ್ಷ ರೂ.ಗಳ ಪರಿಹಾರವನ್ನು ನೀಡುವ ಮೂಲಕ ಸಿಬ್ಬಂದಿಗಳ ಜೀವನಕ್ಕೆ ಭದ್ರತೆ ಒದಗಿಸಬೇಕು. ಸಾದಿಲ್ವಾರು ಜಂಟಿ ಖಾತೆಯನ್ನು ಮುಖ್ಯ ಅಡಿಗೆದಾರರಿಗೆ ವಹಿಸಬೇಕು ಎಂದು ಆಗ್ರಹಿಸಿದರು.

ತಾಲೂಕಾಧ್ಯಕ್ಷೆ ಶಾಂತಾ ತಲಬಟ್ಟಿ ಮಾತನಾಡಿ, ಅಪಘಾತದಲ್ಲಿ ಮರಣ ಹೊಂದಿದ ಸಿಬ್ಬಂದಿಯ ಕುಟುಂಬದವರಿಗೆ ಶಿಕ್ಷಣ ಇಲಾಖೆಯಲ್ಲಿ ಕೆಲಸ ನೀಡಬೇಕು. ಬೇಸಿಗೆ, ದಸರಾ ರಜೆಗಳ ವೇತನವನ್ನು ಒದಗಿಸಬೇಕು.

ಮುಖ್ಯವಾಗಿ, ಬಿಸಿಯೂಟ ಯೋಜನೆಯನ್ನು ಖಾಸಗಿ ಸಂಸ್ಥೆಗಳಿಗೆ ವಹಿಸಬಾರದು. ಅಡುಗೆ ಸಿಬ್ಬಂದಿಗಳನ್ನು ಡಿ ಗ್ರೂಪ್ ನೌಕರರನ್ನಾಗಿ ಪರಿಗಣಿಸಬೇಕು ಎಂದು ಒತ್ತಾಯಿಸಿದರು.

ಬಸ್ಸಮ್ಮ ಜಾವೂರ, ಸುವರ್ಣ ತೋಟದ, ಜೈನಾಬಿ ಅತ್ತಾರ, ಶಾಂತವ್ವ ಹಳ್ಳಿ, ನೀಲವ್ವ ನರಗುಂದ, ಮಮತಾಜ ನದಾಫ್ ಸೇರಿದಂತೆ ತಾಲೂಕಿನ ಬಿಸಿಯೂಟ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ತಾಲೂಕಾಡಳಿತದಿಂದ ಹಡಪದ ಅಪ್ಪಣ್ಣ ಜಯಂತಿ ಆಚರಣೆ



**■ ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ**

ತಾಲೂಕು ಆಡಳಿತ ಸೌಧದ ತಹಸೀಲ್ದಾರ್ ಸಭಾಭವನದಲ್ಲಿ ತಾಲೂಕಾಡಳಿತದಿಂದ ಹಡಪದ ಅಪ್ಪಣ್ಣ ಅವರ ಜಯಂತಿಯನ್ನು ಅವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಸಲ್ಲಿಸಿ, ಪೂಜೆ ಮಾಡುವುದರ ಮೂಲಕ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಅಪರ ತಹಸೀಲ್ದಾರರಾದ ಜಿ.ವಿ.ಪಾಟೀಲ, ವಿವಿಧ ಇಲಾಖೆಗಳ ಅಧಿಕಾರಿಗಳು, ಸಮಾಜದ ಮುಖಂಡರು ಭಾಗವಹಿಸಿದ್ದರು.

ಗದಗ ಜಿಲ್ಲಾ ದಿಗಂಬರ ಜೈನ್ ಸಂಘದ ತಾತ್ಕಾಲಿಕ ಕಾರ್ಯಾಲಯ ಉದ್ಘಾಟನೆ

# ಸಮಾಜ ಬಾಂಧವರು ಮುಖ್ಯವಾಹಿನಿಗೆ ಬರಲಿ



**■ ವಿಜಯಸಾಕ್ಷಿ ಸುದ್ದಿ, ಗದಗ**

ದಿಗಂಬರ ಜೈನ್ ಸಮಾಜಬಾಂಧವರು ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಮುನ್ನಡೆ ಸಾಧಿಸುವ ಮೂಲಕ ಮುಖ್ಯವಾಹಿನಿಗೆ ಬರಬೇಕು ಎಂದು ದಿಗಂಬರ ಜೈನ್ ಸಮಾಜದ ಹಿರಿಯ ಶ್ರಾವಕರಾದ ನರಗುಂದದ ಆದಿನಾಥ ಉಪಾಧ್ಯಾಯ ಅಭಿಪ್ರಾಯಪಟ್ಟರು.

ಅವರು ಹುಡ್ಕೋ ಕಾಲೋನಿಯ ಪ್ರಕಾಶ ಮುತ್ತಿನ ಅವರ ಕಟ್ಟಡದಲ್ಲಿ ತಾತ್ಕಾಲಿಕವಾಗಿ ತೆರೆಯಲಾದ ಗದಗ ಜಿಲ್ಲಾ ದಿಗಂಬರ ಜೈನ್ ಸಂಘದ ಕಾರ್ಯಾಲಯವನ್ನು ಉದ್ಘಾಟಿಸಿ ಮಾತನಾಡಿದರು.

2002ರಲ್ಲಿ ಅಧಿಕೃತವಾಗಿ ನೋಂದಣಿಯೊಂದಿಗೆ ಸ್ಥಾಪನೆಗೊಂಡ ಸಂಘಕ್ಕೆ ಇದುವರೆಗೂ ಒಂದು ಸಮುದಾಯ ಭವನ, ಸಂಘದ ಕಾರ್ಯಾಲಯ ಮಾಡಿಕೊಳ್ಳಲಿಕ್ಕೆ ಆಗದಿರುವದು ವಿಷಾದದ ಸಂಗತಿ. ಈ ಕುರಿತು ನಿವೇಶನ ನೀಡುವಂತೆ ನಗರಸಭೆ, ನಗರಯೋಜನಾ ಪ್ರಾಧಿಕಾರ, ಜಿಲ್ಲಾಡಳಿತಕ್ಕೆ, ಸ್ಥಳೀಯ ಶಾಸಕರಿಗೆ, ಸಚಿವರಿಗೆ ಮನವಿ ಸಲ್ಲಿಸಿದರೂ ಪ್ರಯೋಜನ ಆಗಿಲ್ಲ. ಇನ್ನು ಮುಂದಾದರೂ ಈ ಬಗ್ಗೆ ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು.

ಹಿರಿಯ ಶ್ರಾವಕ ತವನಪ್ಪ ರೋಖಡೆ ಮಾತನಾಡಿ, ಈ ಹಿಂದೆ ಸಂಘದ ಪದಾಧಿಕಾರಿಗಳು ವಾರಕ್ಕೆ, ತಿಂಗಳಿಗೆ ಸಭೆ ಸೇರಿ ಸಮಾಜ ಚಿಂತನೆ, ಧಾರ್ಮಿಕ ಚಿಂತನೆ ಕಾರ್ಯಕ್ರಮಗಳನ್ನು ಮಾಡುತ್ತಿದ್ದು ಆ ಪರಂಪರೆ ಮುಂದುವರೆಯಲಿ ಎಂದರು.

ಪನ್ಯಾಸಕ ಡಾ. ಅಪ್ಪಣ್ಣ ಹಂಜೆ ಮಾತನಾಡಿ, ದಿಗಂಬರ ಜೈನ್ ಸಮಾಜಕ್ಕೆ ತನ್ನದೇ ಆದ ಭವ್ಯ ಇತಿಹಾಸ, ಪರಂಪರೆಯಿದ್ದು, ಇದನ್ನರಿತು ಸಮಾಜಬಾಂಧವರು ಸಂಘಟನಾತ್ಮಕವಾಗಿ ಒಂದುಗೂಡುವ ಮೂಲಕ ಸಮಾಜದ ಬಲವನ್ನು ಹೆಚ್ಚಿಸಬೇಕೆಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ದಿಗಂಬರ ಜೈನ್ ಸಂಘದ ಅಧ್ಯಕ್ಷ ಪಿ ಎ ಕುಲಕರ್ಣಿ ಸಮಾಜ ಚಿಂತನೆಗೆ, ಸಂಘಟನೆಗೆ ಈ ಕಾರ್ಯಾಲಯ ಮುನ್ನುಡಿ ಬರೆಯುವಂತಾಗಲಿ ಎಂದರು.

ಶ್ರೇಯಾ ನಾವಳ್ಳಿ ಹಾಗೂ ಪ್ರೀತಿ ನಾವಳ್ಳಿ ಪ್ರಾರ್ಥಿಸಿದರು. ಸಂಕಪ್ಪ ನಾವಳ್ಳಿ ಸ್ವಾಗತಿಸಿದರು. ಸಂಘದ ಜಿಲ್ಲಾ ಕಾರ್ಯದರ್ಶಿ ಪ್ರಕಾಶ ಮುತ್ತಿನ ನಿರೂಪಿಸಿದರು. ಅನಂತರಾಜ್ ಹೊಸಮನಿ ವಂದಿಸಿದರು.

ನಾಗರಾಜ ತುಕೋಳ, ಎಂ ಟಿ ಕಬ್ಬಿಣ, ರವಿ ಮುತ್ತಿನ, ಅನಂತರಾಜು ಬಸ್ತಿ, ಕಟ್ಟಿಮನಿ, ಸುಭಾಸ ಅಂಗಡಿ, ಆಕಾಶ್ ಮುತ್ತಿನ, ವಸಂತಮಾಲಾ ದೇಸಾಯಿ, ಸುಮನ್ ಮುತ್ತಿನ, ಅರ್ಪಿತಾ ಮುತ್ತಿನ ಮುಂತಾದವರು ಪಾಲ್ಗೊಂಡಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka